

# ಸಿಹಿ ಕಹಿ


ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 06 Issue : 277 Saturday 23-03-2024 E-mail : maruti.b.hosamani76@gmail.com Page: 4 Price : Rs. 1/-


## ಹುನಗುಂದ ಮತ್ತು ಇಳಕಲ್ಲ ಅವಳಿ ತಾಲೂಕಿನ 14 ಎಸ್ಎಸ್ಎಲ್ಸಿ ಪರೀಕ್ಷಾ ಕೇಂದ್ರಗಳಲ್ಲಿ ಸಕಲ ಸಿದ್ಧತೆ: ಜಾಸ್ಮೀನ್ ಕಿಲ್ಲೇದಾರ

**ಹುನಗುಂದ :** ಪ್ರಸಕ್ತ 2023–24 ನೆಯ ಸಾಲಿನ ವಿದ್ಯಾರ್ಥಿಗಳ ಭವಿಷ್ಯ ನಿರ್ಮಾಣದ ಎಸ್ಎಸ್ಎಲ್ಸಿ ಪರೀಕ್ಷೆ ಮಾ.25 ರಿಂದ ಏ.6 ರವರಗೆ ನಡೆಯುವ ಪರೀಕ್ಷೆಗಳಿಗೆ ಹುನಗುಂದ ಮತ್ತು ಇಳಕಲ್ಲ ಅವಳಿ ತಾಲೂಕಿನ 14 ಪರೀಕ್ಷೆ ಕೇಂದ್ರಗಳಲ್ಲಿ ಸಕಲ ಸಿದ್ದತೆಯನ್ನು ಮಾಡಿ ಕೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿ ಜಾಸ್ಮೀನ್ ಕಿಲ್ಲೇದಾರ ತಿಳಿಸಿದರು.

ಶುಕ್ರವಾರ ಪಟ್ಟಣದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಕರೆಯಲಾಗಿದ್ದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಅವರು ಹುನಗುಂದ ಪಟ್ಟಣದ ವಿ.ಮ ಪ್ರೌಢ ಶಾಲೆಯಲ್ಲಿ 2 ಕೇಂದ್ರ, ಧನ್ನೂರ, ಕೂಡಲ ಸಂಗಮ, ಕಮತಗಿ, ಹೂವಿನಹಳ್ಳಿ, ಸೂಳೇಭಾವಿ, ಅಮೀನಗಡ ತಲಾ ಒಂದರಂತೆ ಒಟ್ಟು 8 ಪರೀಕ್ಷೆ ಕೇಂದ್ರಗಳನ್ನು ಹುನಗುಂದ ತಾಲೂಕಿನಲ್ಲಿ ತೆರಯಲಾಗಿದ್ದು. ಇನ್ನು ಇಳಕಲ್ಲ ನಗರದಲ್ಲಿ 3 ಕೇಂದ್ರಗಳು,ಕರಡಿ, ಕಂದಗಲ್ಲ, ಗುಡೂರ ತಲಾ ಒಂದರಂತೆ ಇಳಕಲ್ಲ ತಾಲೂಕಿನಲ್ಲಿ 6 ಪರೀಕ್ಷಾ ಕೇಂದ್ರಗಳನ್ನು ತೆರಯಲಾಗಿದ್ದು. ಅವಳಿ ತಾಲೂಕಿನಲ್ಲಿ ಒಟ್ಟು 14 ಕೇಂದ್ರಗಳಲ್ಲಿ ಬೆಳಗ್ಗೆ 10.30 ಗಂಟೆಯಿಂದ 1.30 ಗಂಟೆಯವರಗೆ ಪರೀಕ್ಷೆಗಳು ನಡೆಯಲಿವೆ.

ಅವಳಿ ತಾಲೂಕಿನ 14 ಪರೀಕ್ಷಾ ಕೇಂದ್ರದಲ್ಲಿ ಒಟ್ಟು 5327 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದಾರೆ.ಅದರಲ್ಲಿ 5224 ರೆಗ್ಯುಲರ್ ವಿದ್ಯಾರ್ಥಿಗಳು,50 ಜನ ವಯೋ ನೇರವಾಗಿ ಪರೀಕ್ಷೆ, 31 ಜನ ಪೇಲಾದ ವಿದ್ಯಾರ್ಥಿಗಳು,



22 ಜನ ರೆಗ್ಯುಲರ್ ರಿಪೀಟರ್ ವಿದ್ಯಾರ್ಥಿಗಳು ಸೇರಿದ್ದಾರೆ. ಒಟ್ಟು 5327 ವಿದ್ಯಾರ್ಥಿಗಳ ಪರೀಕ್ಷೆಗಾಗಿ 250 ಕೊಠಡಿಗಳನ್ನು ಮತ್ತು ಆಸನದ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.ವಿಕಲ ಚೇತನ ಮಕ್ಕಳಿಗೆ ಪ್ರತಿ ಕೇಂದ್ರದಲ್ಲಿ ಕೆಳಗಿನ ಕೊಠಡಿಯಲ್ಲಿ ಪರೀಕ್ಷೆ ಬರೆಯಲು ವಿಶೇಷ ಕೊಠಡಿಯನ್ನು ತೆರೆಯಲಾಗಿದೆ. ಎಲ್ಲ ಪರೀಕ್ಷಾ ಕೊಠಡಿಗಳಿಗೆ ಸಿಸಿ ಟಿವಿಯನ್ನು ಅಳವಡಿಸಲಾಗಿದೆ.

300 ಸಿಬ್ಬಂದಿಗಳ ನಿಯೋಜನೆ–ಎಸ್.ಎಸ್.ಎಲ್.ಸಿ ಪರೀಕ್ಷೆಗಳನ್ನು ಅತ್ಯಂತ ಪಾರದರ್ಶಕ ಮತ್ತು ಕಟ್ಟು ನಿಟ್ಟಾಗಿ ನಡೆಸಲು 14 ಜನ ಮುಖ್ಯ ಅಧೀಕ್ಷಕರು, 7 ಜನ ಉಪ ಅಧೀಕ್ಷಕರು, 14 ಜನ ಕಸ್ಟೋಡಿಯನ್, 7 ಜನ ಮಾರ್ಗಾಧಿಕಾರಿಗಳು, 14 ಜನ ಸ್ಥಾನಿಕ ಜಾಗೃತ ದಳ, 14 ಜನ ಮೋಬೈಲ್ ಸ್ವಾಧೀನಾಧಿಕಾರಿಗಳು, ಇದೇ ಮೊದಲ ಬಾರಿಗೆ 14 ಜನ ಸಿಸಿ ಟಿವಿ ವೀಕ್ಷಕರನ್ನು ನೇಮಕ ಸೇರಿದ್ದಂತೆ ಒಟ್ಟು 300 ಜನ ಸಿಬ್ಬಂದಿಗಳನ್ನು ಪರೀಕ್ಷೆ ಕಾರ್ಯಕ್ಕೆ ನಿಯೋಜನೆ ಮಾಡಲಾಗಿದೆ. ಅದರ ಜೊತೆಗೆ ಆರೋಗ್ಯ ಇಲಾಖೆಯ ಸಹಾಯಕ ಆರೋಗ್ಯಧಿಕಾರಿಗಳು, ಆಶಾ ಕಾರ್ಯಕರ್ತೆಯರು ಮತ್ತು ಪರೀಕ್ಷಾ ಕೇಂದ್ರ ಸೂಕ್ತ ಬಿಗಿ ಬಂದೋಬಸ್ತಗೆ ಪೊಲೀಸ್ ಸಿಬ್ಬಂದಿಗಳನ್ನು ನೇಮಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಸಂಗಮೇಶ ಹೊದ್ಲೂರ, ಪ್ರಶಾಂತ ಪಟ್ಟದಕಲ್ಲ, ನಾಗರಾಜ ಹೊಸೂರ ಸೇರಿದ್ದಂತೆ ಅನೇಕರು ಇದ್ದರು.

**ಎಸ್ಎಸ್ಎಲ್ಸಿ ಪರೀಕ್ಷೆ ಮಾ. 25 ರಿಂದ ಆರಂಭವಾಗಲಿದ್ದು. ಪ್ರತಿಯೊಂದು ಪರೀಕ್ಷೆಗಳು ಬೆಳಗ್ಗೆ 10.30 ಗಂಟೆಯಿಂದ 1.30 ಗಂಟೆಯವರಗೆ ನಡೆಯಲಿವೆ.ವಿದ್ಯಾರ್ಥಿಗಳು ಪರೀಕ್ಷೆಯ ಸಮಯದ ಕ್ಕಿಂತ 30 ನಿಮಿಷ ಮುಂಚೆ ಪರೀಕ್ಷಾ ಕೊಠಡಿಯಲ್ಲಿ ಇರಬೇಕು. ಪರೀಕ್ಷಾ ಕೇಂದ್ರ ಸುತ್ತಲೂ 200 ಮೀಟರ್ ನಿಷೇದಾಜ್ಞೆ ಜಾರಿಯಲ್ಲಿದ್ದು. ಈ ಸ್ಥಳದಲ್ಲಿ ಝುರಾಕ್ಸ್ ಮತ್ತು ಇನ್ನಿತರ ಅಂಗಡಿ ಮುಗ್ಗಟ್ಟುಗಳನ್ನು ತೆರೆಯಲು ಅವಕಾಶ ಇರೋದಿಲ್ಲ.**

**–ಜಾಸ್ಮೀನ್ ಕಿಲ್ಲೇದಾರ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹುನಗುಂದ.**

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮಲ್ಲಿಕಾರ್ಜುನ. ಎಂ.ಬಂಡರಗಲ್ಲ ಹುನಗುಂದ**

## ಗ್ರಾಮಸ್ಥರಿಂದ ಗ್ರಾಮ ಪಂಚಾಯಿತಿಗೆ ಬೀಗ ಜಡಿದು ತಲೆಯ ಮೇಲೆ ಇಟ್ಟುಕೊಂಡು ಉಪವಾಸ ಧರಣಿ ಸತ್ಯಾಗ್ರಹ

**ತಿಳಗೂಳ :** ದೇವರ ಹಿಪ್ಪರಗಿ ತಾಲೂಕಿನ ಕೆರುಟಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ತಿಳಗೂಳ ಗ್ರಾಮದಲ್ಲಿ ನೀರಿಗಾಗಿ ಹಾಹಾಕಾರ...! ಗ್ರಾಮಸ್ಥರಿಂದ ಗ್ರಾಮ ಪಂಚಾಯಿತಿಗೆ ಬೀಗ ಮುದ್ರೆ ಹಾಕಿ ತಲೆಯ ಮೇಲೆ ಕಲ್ಲು ಇಟ್ಟುಕೊಂಡು ಉಪವಾಸ ಧರಣಿ ಸತ್ಯಾಗ್ರಹ...!! ತಿಂಗಳಾದ್ರು ಬರ್ತಾ ಇಲ್ಲ ನಲ್ಲಿ ನೀರು..,? ತಿಂಗಳುಗಳೇ ಕಳೆದರೂ ಗ್ರಾಮ ಪಂಚಾಯಿತಿಗೆ ಬಾರದ ಅಭಿವೃದ್ಧಿ ಅಧಿಕಾರಿಗಳು, ತಿಳಗೂಳ ಗ್ರಾಮದ ನೆರವಿಗೆ ಬರ್ತಾರಾ ಶಾಸಕ ರಾಜುಗೌಡ ಪಾಟೀಲ್, ವಿಜಯಪುರ ಜಿಲ್ಲೆಯ ದೇವರ ಹಿಪ್ಪರಗಿ ತಾಲೂಕಿನ ತಿಳಗೂಳ ಗ್ರಾಮದಲ್ಲಿ ನೀರಿಗಾಗಿ ಹಾಹಾಕಾರ .

ತಿಳಗೂಳ ಗ್ರಾಮದಲ್ಲಿ ತಿಂಗಳು ಕಳೆದರೂ ಯಾವುದೇ ನಲ್ಲಿಗಳಲ್ಲಿ ನೀರು ಬರುತ್ತಾ ಇಲ್ಲ. ಗ್ರಾಮದ ಎರೆ ಹೋಲದಲ್ಲಿ ಸರ್ಕಾರದಿಂದ ಎರಡು ಬಾವಿಗಳನ್ನು ನಿರ್ಮಿಸಿದ್ದರು ಯಾವುದೇ ಪ್ರಯೋಜನವಾಗಿಲ್ಲ.

ದೇವರು ವರ ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ ಎನ್ನುವಂತಾಗಿದೆ. ಎರಡು ಬಾವಿಗಳಲ್ಲಿ ನೀರು ತುಂಬಿರುತ್ತದೆ ಎರಡು ಬಾವಿಗಳ ಪೈಪ್ಲೈನ್ ಒಡೆದು ಹೋಗಿ ಸುಮಾರು 4 ರಿಂದ 5 ವರ್ಷಗಳು ಗತಿಸಿದರೂ ಯಾವೊಬ್ಬ ಅಧಿಕಾರಿಯೂ ಸಹ ಇತ್ತ ಕಡೆ ಗಮನ ಹರಿಸಿಲ್ಲ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಭಿವೃದ್ಧಿ ಅಧಿಕಾರಿಗಳು, ತಾಲೂಕು ಪಂಚಾಯತ್ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಮಾಡಿದರೂ ಸಹ ಯಾವುದೇ



ಪ್ರಯೋಜನವಾಗಿಲ್ಲ.

ಗ್ರಾಮಸ್ಥರಿಂದ ಗ್ರಾಮ ಪಂಚಾಯಿತಿಗೆ ಬೀಗ ಮುದ್ರೆ ಹಾಕಿ ತಲೆಯ ಮೇಲೆ ಕಲ್ಲು ಇಟ್ಟು–ಕೊಂಡು ಉಪವಾಸ ಧರಣಿ ಸತ್ಯಾಗ್ರಹ ಕೈಗೊಂಡಿದ್ದು.

ಈ ಕೆಳಗಿನ ಬೇಡಿಕೆಗಳು

1) ಕೂಡಲೇ ಕುಡಿಯುವ ನೀರಿನ ಪೂರೈಕೆ ಮಾಡಬೇಕು ಮತ್ತು ಎರೆ ಹೋಲದಲ್ಲಿ ಇರುವ ಎರಡು ಬಾವಿಗಳ ಪೈಪ್ಲೈನ್ ಮಾಡಬೇಕು.
2)ಈ ಭ್ರಷ್ಟ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸಸ್ಪೆಂಡ್ ಮಾಡಬೇಕು.
3)15 ನೇ ಹಣಕಾಸು ಸಂಪೂರ್ಣ ತನಿಖೆ ಆಗಬೇಕು, ಕೊಳ್ಳೆ ಹೊಡೆದ ಹಣವನ್ನು ಸರ್ಕಾರಕ್ಕೆ ಮರಳಿ ತುಂಬಿಸಬೇಕು.
4) ಎಸ್ಸಿ ಎಸ್ಟಿ ವಾರ್ಡ್ ಗಳಲ್ಲಿ ಸಿಸಿ ರಸ್ತೆಗಳು ನಿರ್ಮಾಣ ಮಾಡಬೇಕು.
5) ಪಂಚಾಯಿತಿಯಲ್ಲಿ ಇರುವ ಕಸದ ವಾಹನವನ್ನು ಪ್ರತಿ ಹಳ್ಳಿಗಳಿಗೆ ಕಳಿಸಬೇಕು.
6) ಶುದ್ಧ ಕುಡಿಯುವ ನೀರಿನ ಘಟಕ ಚಾಲನೆ ಮಾಡಬೇಕು .

ಈ ಎಲ್ಲಾ ಬೇಡಿಕೆಗಳನ್ನು ಇಡೆರುವರೆಗೂ ಧರಣಿ ಸತ್ಯಾಗ್ರಹ ಹಿಂದೆ ತೆಗೆದು ಕೊಳ್ಳುವುದಿಲ್ಲ ಎಂದು ಗ್ರಾಮದ ಮುಖಂಡರಾದ ವಿಠೋಬಾ ನಾಟೀಕಾರ, ನಿತ್ಯಾನಂದ ಕತ್ತಿ, ಮಾಂತಪ್ಪ ಸಂದಿಮನಿ, ದಾನೇಶ ಕೇಸರಿ, ಶರಣಪ್ಪ ಗದ್ದಗಿ, ಮುತ್ತು ಬಯ್ಯಾರ,ರಾಜು ಸಂದಿಮನಿ, ಸುಸಿಲಬಾಯಿ ಮಾದರ, ಸೀತಮ್ಮ ಗದ್ದಲಮಾರಿ,ರಾಮನಗೌಡ ಯಾಳವಾರ,ಮಾಂತಪ್ಪ ಗುಡಿಸಲಮನಿ , ಸಂತೋಷ್ ದೊಡಮನಿ, ಆನಂದ ಕಲಕೇರಿ, ದ್ಯಾವಪ್ಪ ದೊಡಮನಿ ಇನ್ನೂ ಗ್ರಾಮದ ಹಿರಿಯರು ಕಿರಿಯರು ಯುವಕರು ಮುಂತಾದವರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಭೀಮಪ್ಪ.ಹಚ್ಯಾಳ. ದೇವರ ಹಿಪ್ಪರಗಿ**

### ಶಿವನಿಗೆ ಶ್ರದ್ಧೆ–ಭಕ್ತಿ–ಶ್ರದ್ಧೆ–ತನು–ಮನ ಸಮರ್ಪಣೆಯೆ

## ಮಹಾಶಿವರಾತ್ರಿ: ನ್ಯಾ. ದಾನೇಶ ಅವಟಿ



**ವಿಜಯಪುರ :** ವಿಜಯಪುರ: ಶಿವನಿಗೆ ಭಕ್ತಿ– ಶ್ರದ್ದೆ– ತನು –ಮನ ಸಮರ್ಪಣೆ ಯೆ ನಿಜವಾದ ಜಾಗರಣೆ ಮಹಾಶಿವರಾತ್ರಿ ಎಂದು ನ್ಯಾಯವಾದಿ ದಾನೇಶ ಅವಟಿ ನುಡಿದರು.

ವಾರ್ಡ್ ಸಂಖ್ಯೆ 35 ಪ್ರತೀಕ್ಷಾ ನಗರದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ನೂತನ ಬೆಳ್ಳಿ ಮೂರ್ತಿ ಪ್ರತಿಷ್ಠಾಪನೆ ಕುಂಭಮೇಳ ಹಾಗೂ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿ ಉಪನ್ಯಾಸಕರಾಗಿ ಭಾಗವಹಿಸಿ ಮಾತನಾಡಿದ ಅವರು ಭಕ್ತಿ ಪ್ರಿಯನಾದ ಶಿವನಿಗೆ ಶಿವರಾತ್ರಿ ದಿನದಂದು ಮಾಡುವ ಪೂಜೆ– ಅರ್ಚನೆ – ಉಪವಾಸ – ಜಾಗರಣೆ ಸಾಂಕೇತಿಕ.ಆದರೆ ನಾವು ಸದಾಕಾಲ ಕಾಯಕ– ದಾಸೋಹ– ಪರೋಪಕಾರ– ಜನಸೇವೆಯೇ ನಿಜವಾದ ಪೂಜೆ ಅದನ್ನು ನಾವು ಮೈಗೂಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಬೆಳಗಾವಿ ಲೋಕೋಪಯೋಗಿ ಇಲಾಖೆಯ ಅಭಿಯಂತರ ಅರುಣ್ ಪಾಟೀಲ್ ಮಾತನಾಡಿ

ಭಾರತೀಯ ಪರಂಪರೆಯಲ್ಲಿ ಹಬ್ಬ– ಹರಿದಿನ– ಜಾತ್ರೆ– ಉತ್ಸವಗಳಿಗೆ ಮಹತ್ವದ ಸ್ಥಾನವಿದ್ದು ಅವು ನಮ್ಮ ಸಂಸ್ಕೃತಿಯ ಪ್ರತಿಬಿಂಬ ಅವುಗಳನ್ನು ಆಚರಿಸುವ ಮೂಲಕ ನಾವು ಮುಂಬರುವ ಜನಾಂಗಕ್ಕೆ ಪುರಾಣ– ಪ್ರವಚನ ಮೂಲಕ ಸಂಸ್ಕೃತಿ – ಸಂಸ್ಕಾರ–ಆಚಾರ – ವಿಚಾರ – ಮಾನವೀಯ ಮೌಲ್ಯಗಳನ್ನು ಕಟ್ಟಿ ಕೊಡುವ ಕಾರ್ಯವಾಗಬೇಕು.ಅದನ್ನು ಪ್ರತೀಕ್ಷಾ ನಗರದ ಸದ್ಭಕ್ತರು ಬಹಳ ಚೆನ್ನಾಗಿ ಆಚರಣೆಯಲ್ಲಿ ತರುತ್ತಿದ್ದಾರೆ ಎಂದು ಬಣ್ಣಿಸಿದರು.

ಇದೇ ಸಂದರ್ಭದಲ್ಲಿ ದಿವ್ಯ ಸಾನಿಧ್ಯ ವಹಿಸಿದ ಶ್ರೀ ಪ.ಪೂ ಅಭಿನವ ಮುರುಗೇಂದ್ರ ದೇವರು ತೊರವಿ ಮಠ, ಹಾಗೂ ಶ್ರೀ ಮಲ್ಲಿಕಾರ್ಜುನ ಮಠಪತಿ, ಪ್ರಧಾನ ಅರ್ಚಕರು ಆರ್ಶೀವಚನ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಮಲ್ಲಿಕಾರ್ಜುನ ವಿವಿದ್ದೇಶಗಳ ಸಮಿತಿ ಅಧ್ಯಕ್ಷರಾದ ಅರ್ಜುನ ಜಾಧವ ಮಾತನಾಡಿದರು.

ಮಹಾನಗರ ಪಾಲಿಕೆಯ ಸದಸ್ಯರಾದ ರಾಜಶೇಖರ ಕುರಿ ವೇದಿಕೆಯಲ್ಲಿ ಉಪಸ್ಥಿತರಿದ್ದು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಶಿವನ ಬೆಳ್ಳಿ ಮೂರ್ತಿಗೆ ಸಹಾಯ ಸಲ್ಲಿಸಿದ ನಿವೃತ್ತ ಮಾಜಿ ಯೋಧ ಚನ್ನಪ್ಪ ಕೋಡಣಿ ಹಾಗೂ ಇತರರನ್ನು ಸನ್ಮಾನಿಸಲಾಯಿತು. ಶ್ರೀ ಮಲ್ಲಿಕಾರ್ಜುನ ದೇವಸ್ಥಾನ ಸಮಿತಿಯ ಸಕಲ ಪದಾಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬೆಳಿಗ್ಗೆ ಜಿ.ಕೆ.ಪಾಟೀಲ ಮಂಗಲಕಾರ್ಯಾಲಯದಿಂದ ಪ್ರತೀಕ್ಷ ನಗರದ ಮಲ್ಲಿಕಾರ್ಜುನ ದೇವಸ್ಥಾನದವರೆಗೆ ಸಕಲ ವಾದ್ಯ ವೃಂದದೊಂದಿಗೆ ಸುಮಂಗಲೆಯರ ಕುಂಭಮೇಳ ಜರುಗಿತು.

ಸಂಜೆ ಪಿ.ಬಿ. ಭಜಂತ್ರಿ ತಂಡದವರಿಂದ ಸಂಗೀತ ಸಂಜೆ ಕುಮಾರಿ ಪ್ರತೀಕ್ಷ ಕಾತ್ರಾಳ ಹಾಗೂ ಅನುಷ್ಕಾ ಕಟ್ಟಿಮನಿ ಅವರಿಂದ ಭರತನಾಟ್ಯ ಜರುಗಿತು. ಗಗನಮಹಲಿ ಸರ್ ಸ್ವಾಗತಿಸಿದರು. ರೆಡ್ಡಿ ಸರ್ ನಿರೂಪಿಸಿ ವಂದಿಸಿದರು. ಮಹಾಪ್ರಸಾದದೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಕೊನೆಗೊಂಡಿತು.

## ಸಂಗೀತಾ ಹುಲ್ಲೂರ ಅವರಿಗೆ ಪಿಎಚ್ಡಿ

**ವಿಜಯಪುರ :** ಕರ್ನಾಟಕ ರಾಜ್ಯ ಅಕ್ಕಮಹಾದೇವಿಮಹಿಳಾವಿಶ್ವವಿದ್ಯಾನಿಲಯವು ಸಂಗೀತಾ ಹುಲ್ಲೂರ ಅವರು ಸಲ್ಲಿಸಿದ್ದ "ಎಫೆಕ್ಟ್ ಆಫ್ ಮೆಡಿಟೇಷನ್ಆ್ಯಂಡ್ ಫಿಜಿಕಲ್ ಎಕ್ಸರ್ಸೈಜಸ್ ಆನ್ ಸೈಕೋ–ಸೋಸಿಯೋಲಾಜಿಕಲ್ ಆ್ಯಂಡ್ ಫಿಜಿಯೋಲಾಜಿಕಲ್ ವೇರಿಯಬಲ್ಸ್ ಆಫ್ ಸ್ಪೋರ್ಟ್ಸ್‌ವುಮನ್" ಕುರಿತು ಸಲ್ಲಿಸಿದ್ದ ಮಹಾಪ್ರಬಂಧಕ್ಕೆ ಪಿಎಚ್ಡಿ ಪದವಿ ನೀಡಿದೆ.



ಸಂಗೀತಾ ಹುಲ್ಲೂರ ಅವರು ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಜ್ಞಾನ ವಿಭಾಗದ ಪ್ರೊ. ಡಿ.ಎಂ. ಜ್ಯೋತಿ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟ–ರೇಟ್ ಪದವಿ ಪಡೆದಿರುವ ಸಂಗೀತಾ ಹುಲ್ಲೂರ ಅವರನ್ನು ಕುಲಪತಿ ಪ್ರೊ.ಬಿ.ಕೆ. ತುಳಸಿಮಾಲ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಎಚ್.ಎಂ. ಚಂದ್ರಶೇಖರ ಅಭಿನಂದಿಸಿದ್ದಾರೆ.

## ಆಧ್ಯಾತ್ಮ ವಿಲ್ಲದ ವಿದ್ಯ, ರಾಮನಿಲ್ಲದ ಅಯೋಧ್ಯಾ: ಮಸೂತಿ ಶ್ರೀ

**ತಾಳಿಕೋಟೆ :** ಮಾನವರಾದ ನಮಗೆ ಫಲಾಪೇಕ್ಷೆವೆಂಬುದು ಇರಬಾರದು ಇದರಿಂದ ಬೇಕು ಬೇಕು ಎನ್ನುವದು ದೂರ ಸರಿಯುತ್ತದೆ ಅದನ್ನು ತಡೆದುಕೊಳ್ಳುವಂತಹ ಶಕ್ತಿ ಭಗವಂತನೇ ಕೊಡಬೇಕು ಯಾವ ರೀತಿ ಮನೆಯಲ್ಲಿ ಬಿದ್ದ ಕಸವನ್ನು ಸ್ವಚ್ಚಗೊಳಿಸಲು ಅರಿವೆಗಳನ್ನು ಉಪಯೋಗಿಸಲಾಗುತ್ತದೆಯೋ ಹಾಗೆ ಪುರಾಣ ಪ್ರವಚನವು ಮನದಲ್ಲಿಯ ಮಲೀನ ಸ್ವಚ್ಚ ಮಾಡುತ್ತದೆ ಎಂದು ಪುರಾಣ ಪ್ರವಚನಕಾರರಾದ ಮಸೂತಿಯ ಪೂಜ್ಯ ಶ್ರೀ ಡಾ.ಶಿವಲಿಂಗಯ್ಯ ಶರಣರು ನುಡಿದರು.

ಸಾಂಭ ಪ್ರಭು ಶರಣ ಮುತ್ಯಾರವರ ಜರುಗಲಿರುವ ಜಾತ್ರೋತ್ಸವ ಕುರಿತು ಬುಧವಾರರಂದು ಜರುಗಿದ 3ನೇ ದಿನದಂದು ಸುಕ್ಷೇತ್ರ ಅಂಕಲಿಯ ಶ್ರೀ ಗುರು ನಿರೂಪಾದೀಶ್ವರರ ಮಹಾ ಪುರಾಣ ಪ್ರವಚನದಲ್ಲಿ ಮಾತನಾಡುತ್ತಿದ್ದ ಅವರು ಶರಣರ ನುಡಿಮುತ್ತು ಕೇಳುವದರಿಂದ ಆನಂದ ಕೊಡುತ್ತದೆ ಪುರಾಣ ಅನ್ನುವದೇ ಒಂದು ಹೊಳಿ ಇದ್ದಂತೆ ಎಂದರು. ರಾಯಚೂರ ಜಿಲ್ಲೆಯ ಮಾನ್ವಿ ತಾಲೂಕಿನ ತಪ್ಪಲಗುಡ್ಡಿಯಲ್ಲಿದ್ದಂತಹ ಆದರ್ಶ ದಂಪತಿಗಳಾದ ಗುರುಲಿಂಗಯ್ಯನವರು ಹಾಗೂ ರಾಚಮ್ಮನವರು ಅತೀವ ಭಕ್ತಿ ಭಾವದಿಂದ ಆಧ್ಯಾತ್ಮೀಕ ಚಿಂತನೆಯೊಂದಿಗೆ ಬಧುಕು ಸಾಗಿಸುತ್ತಾ ಸಾಗಿದ ಈ ದಂಪತಿಗಳು ಆ ಊರಿನ ಎಲ್ಲ



ಜನಮೆಚ್ಚುಗೆಗೆ ಪಾತ್ರರಾಗಿದ್ದರು.

ಇಂತಹ ಆದರ್ಶ ದಂಪತಿಗಳಿಗೆ ಸಂತಾನ ಪ್ರಾಪ್ತಿಯಾಗಲಾರದ್ದೇ ತೊಂದರೆ ಎಂಬುದು ಕಾಡುತ್ತಿತ್ತು ಭಕ್ತರ ಮನೆಗೆ ಹೋಗಿ ದಿನನಿತ್ಯ ಹಿಟ್ಟು ಸಂಗ್ರಹ ಮಾಡಿಕೊಂಡು ಬರತಕ್ಕಂತಹ ಗುರುಲಿಂಗಯ್ಯನವರು ಪತ್ನಿಗೆ ಆ ಹಿಟ್ಟನ್ನು ನೀಡಿ ತಮ್ಮ ದಿನದ ಊಟದ ವ್ಯವಸ್ಥೆಯನ್ನು ಮಾಡಿಕೊಳ್ಳುತ್ತಾ ಸಾಗಿದ್ದ ಈ ದಂಪತಿಗಳಿಗೆ ಮಕ್ಕಳಾಗಲಾರದ್ದೇ ಕೊರಗೆ ಒಂದು ಹೋದಲ್ಲಿ ಬಂದಲ್ಲಿ, ಕುಳಿತಲ್ಲಿ, ನಿಂತಲ್ಲಿ ಕಾಡುವಂತಹ ಸ್ಥಿತಿ ಮುಂದುವರೆದಿತ್ತು ಗುರುಲಿಂಗಯ್ಯನವರು ತಮ್ಮ ಓಣಿಯಲ್ಲಿ ಮಕ್ಕಳೇ ತಮ್ಮ ಮಕ್ಕಳೆಂದು ಭಾವಿಸಿದ್ದ ಇವರು ಗುರು ಅನ್ನುವಂತಹ ಶಕ್ತಿಯಿಂದ ತಮ್ಮ ಮನೆಯ ದೇವರಿಗೆ ಭಕ್ತಿಭಾವದಿಂದ ನಡೆದುಕೊಳ್ಳುವಂತಹ ಕಾರ್ಯ ಮಾಡಬೇಕೆಂಬುದು ಈ ದಂಪತಿಗಳಿಗೆ ಸಲಹೆ ನೀಡಲಾಗಿತ್ತು ಮನೆಯ ದೇವರಿಗೆ ತೆರಳಬೇಕೆಂಬ ಪತ್ನಿ ರಾಚಮ್ಮಳಿಗೆ ಗುರುಲಿಂಗಯ್ಯನವರು ಹೇಳಿದಾಗ ಆಕೆ ನಿರಾಕರಿಸುತ್ತಾಳೆ ಗುರುಗಳು ಹೇಳಿದ್ದಾರೆಂಬ ಬುದ್ದಿ ಮಾತನ್ನು ಪತಿ ಗುರುಲಿಂಗಯ್ಯನವರು ಹೇಳಿದಾಗ ಅಂದಿನ ರಾತ್ರಿಯೇ ಪತ್ನಿ ರಾಚಮ್ಮಳಿಗೆ ಕನಸ್ಸು ಬಿಳ್ಳುತ್ತದೆ ಆ ಕನಸಿನಲ್ಲಿ ಹಂಪಿ ವಿರುಪಾಕ್ಷದೇವರು ಆಗಮಿಸಿ ನೀನೇನು ತಪ್ಪು ಯೋಚನೆ ಮಾಡಬೇಡಾ ನೀನು ನನ್ನ ಮಗಳೇ ನಿನ್ನನ್ನು ಪರಿಕ್ಷೆ ಮಾಡಿದೆ ನನ್ನ ಹತ್ತಿರ ಬರಬೇಕು ಭಾನ, ಬತ್ತಿ ಎಣ್ಣೆ ತರಬೇಕು ಎಂದು ಸ್ವಪ್ನದಲ್ಲಿ ಹೇಳಿದ ವಿರುಪಾಕ್ಷ ದೇವರ ಮಾತಿಗೆ ಮರುದಿನವೇ ಪತಿ ಗುರುಲಿಂಗಯ್ಯನವರೊಂದಿಗೆ ಹಂಪಿ ವೀರುಪಾಕ್ಷ ದೇವಾಲಯಕ್ಕೆ ಬರುತ್ತಾರೆ ದೇವನ ಪೂಜೆ ಗೈಯುವ ಸಮಯದಲ್ಲಿ ದೇವರ ಮೇಲಿದ್ದ ಹೂವು ಒಂದು ಭಲಭಾಗವೇ ಜಾರಿ ಬಿಳ್ಳುತ್ತದೆ ಇದನ್ನು ಲಕ್ಷೀಸಿದ ದೇವಾಲಯದ ಅರ್ಚಕನ ವಾಣಿಯಂತೆ ತಾಯಿ ನಿನಗೆ ಗಂಡು ಮಗು ಹುಟ್ಟುತ್ತದೆ ನೀವು ತಾಯಿಯಾಗುತ್ತೀರಿ ಎಂದಾಗ ಶರಣೆ ರಾಚಮ್ಮ ಹರ್ಷ ವ್ಯಕ್ತಪಡಿಸುತ್ತಾಳಂತೆ ಅಂದು ಪ್ರಸಾದ ಸ್ವಿಕರಿಸಿದ ರಾಚಮ್ಮ ಗರ್ಭದರಿಸುತ್ತಾಳೆ ಬಂಜೆಯ ಬಧುಕು ಬಂಗಾರವಾಗುತ್ತದೆ ಎಂದು ಹೇಳಿದ ಶ್ರೀಗಳು ಬಂಜೆ–ಯ ಬಧುಕು ಬಂಗಾರ ಹೇಗಾಯಿತು ಎನ್ನುವ ವಿಷಯ ಕುರಿತು ಭಹು ಮಾರ್ಮಿಕವಾಗಿ ವಿವರಿಸಿದ ಶ್ರೀಗಳು ಗುರುವಿನ ಆಶಿರ್ವಾದದಿಂದ ಧಶರಥ ಮಹಾರಾಜನಿಗೆ ಪುತ್ರ ಸಂತಾನವಾಗಿದ್ದರ ಕುರಿತು ಅನೇಕ ಕಿರುಕಥೆಗಳನ್ನು ಹೇಳಿ ಭಕ್ತ ಸಮೂಹಕ್ಕೆ ಬೆರಗುಗೊಳಿಸಿದರಲ್ಲದೇ ಗುರುಗಳು ನೀಡಿದ ಪ್ರಸಾದ ಮಹಾ ಪ್ರಸಾದವಾಗಿ ಮಾರ್ಪಟ್ಟಿದ್ದನ್ನು ಸಹ ತಮ್ಮ ಮಾತಿನಲ್ಲಿಯೇ ಧರ್ಶನ ನೀಡಿ–ದಂತೆ ಭಕ್ತ ಸಮೂಹಕ್ಕೆ ತಿಳಿ ಹೇಳಿದ ಶ್ರೀಗಳು ಮುಂದೆ ಗುರುಲಿಂಗಯ್ಯನವರ ಪತ್ನಿ ಶರಣೆ ರಾಚಮ್ಮಳಗೆ ಕುಬಸ ಮಾಡುವಂತಹ ಕಾರ್ಯ ಆ ಗ್ರಾಮದಲ್ಲಿ ನಡೆಯುತ್ತದೆ ಎಂದು ಮಹಾ ಪುರಾಣ ಮುಂದುವರೆಸಿದರು.

ವೇದಿಕೆಯ ಮೇಲೆ ಬಸಣ್ಣಮುತ್ಯಾ ಶರಣರ, ಶರಣಪ್ಪಮುತ್ಯಾ ಶರಣರ, ಮೊದಲಾದವರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಿದ್ದಣ್ಣ ಶರಣ–ರ, ಮಲ್ಲಣ್ಣ, ಲಿಂಗರಾಜ, ಸಂಗಮೇಶ, ಹಾಗೂ ಶರಣಗೌಡ ಪೊಲೀಸ್‌ಪಾಟೀಲ, ಕಾಶಿರಾಯ ದೇಸಾಯಿ(ಶಳ್ಳಗಿ), ಸಂಗಣ್ಣ ಹೂಗಾರ, ಶಾಂತಗೌಡ ಬಿರಾದಾರ, ಮಲ್ಲಣ್ಣ ಇಂಗಳಗಿ, ಶರಣಗೌಡ ಬಿರಾದಾರ, ತಿಪ್ಪಣ್ಣ ಸಜ್ಜನ, ಶ್ರೀಕಾಂತ ಕುಂಭಾರ, ಶ್ರೀಮತಿ ಕಾಶಿಬಾಯಿ ಶರಣ–ರ, ಹಾಗೂ ಸಂಗೀತಗಾರರಾದ ಕುಮಾರ ಕುದರಗುಂಡ, ಬಸನಗೌಡ ಬಿರಾದಾರ, ವಾಯಿಲಿನ್ ವಾದಕ ಯಲ್ಲಪ್ಪ ಗುಂಡಳ್ಳಿ, ಮೊದಲಾದವರು ಉಪಸ್ಥಿತರಿದ್ದರು.

## ಮತದಾರರ ಸಾಕ್ಷರತಾ ಸಂಘಗಳ ತಾಲೂಕಾ ಮಟ್ಟದ ತರಬೇತುದಾರರ ತರಬೇತಿ

**ವಿಜಯಪುರ :** ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತಿ, ಜಿಲ್ಲಾ ಸ್ವೀಪ್ ಸಮಿತಿ, ವಿಜಯಪುರ ಇವರ ಸಹಯೋಗದಲ್ಲಿ ಗುರುವಾರ ಜಿಲ್ಲಾ ಪಂಚಾಯತಿ, ಸಭಾ ಭವನದಲ್ಲಿ ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಹಿನ್ನೆಲೆಯಲ್ಲಿ ಭವಿಷ್ಯದ ಮತ್ತು ಯುವ ಮತದಾರರಿಗೆ ಮತದಾನ ಶಿಕ್ಷಣದ ಪ್ರಾಮುಖ್ಯತೆ ಜಾಗೃತಿ ಮತ್ತು ಅರಿವು ಮೂಡಿಸುವ ಸಂಬಂಧ ಶಾಲಾ, ಕಾಲೇಜು, ಕಾರ್ಯಾಲಯದ ಮುಖ್ಯಸ್ಥರುಗಳಿಗೆ ತಾಲೂಕ ಮಟ್ಟದ ಸಂಪನ್ಮೂಲ ತರಬೇತುದಾರರಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ಹಮ್ಮಿಕೊಳ್ಳಲಾಯಿತು. ಈ ತರಬೇತಿಯ ಅತಿಥಿಗಳಾಗಿ ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿಗಳಾದ ಬಿ.ಎಸ್. ಮೂಗನೂರಮಠ್, ಯೋಜನಾ ನಿರ್ದೇಶಕರಾದ ಸಿ.ಆರ್.ಮುಂಡರಗಿ, ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಸಚಿವರು ಶಂಕರಗೌಡ ಸೋಮನಾಳ, ಶಾಲಾ




ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಯ ಉಪನಿರ್ದೇಶಕರು ಎನ್.ಎಚ್.ನಾಗೂರ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರು ಡಾ.ಸಿ.ಕೆ. ಹೊಸಮನಿ, ಹಾಗೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲರಾದ ಮಹಾದೇವಿ ಸೊನ್ನದ, ಇವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ತರಬೇತಿಯಲ್ಲಿ ಭಾಗವಹಿಸಿದ ಶಾಲಾ, ಕಾಲೇಜು, ಕಾರ್ಯಾಲಯದ ಮುಖ್ಯಸ್ಥರುಗಳಿಗೆ ಲೋಕಸಭಾ ಸಾರ್ವತ್ರಿಕ ಚುನಾವಣೆ–2024ರ ಹಿನ್ನೆಲೆಯಲ್ಲಿ ಭವಿಷ್ಯದ ಮತ್ತು ಯುವ ಮತದಾರರಿಗೆ ಮತದಾನ ಶಿಕ್ಷಣ ಪ್ರಾಮುಖ್ಯತೆ ಜಾಗೃತಿ ಮತ್ತು ಅರಿವು ಮೂಡಿಸುವ ಸಂಬಂಧ ಶಿಕ್ಷಣಾಧಿಕಾರಿಗಳು (ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ, ವಿಜಯಪುರ) ಡಾ. ಅಶೋಕ ಮಲಿಮ್ಮರ್ ಇವರು ಜಿಲ್ಲಾ ಮಟ್ಟದ ಸಮಗ್ರ ತರಬೇತಿ ಉಸ್ತುವಾರಿ ತಂಡದವರು ತರಬೇತಿಯನ್ನು ನೀಡಿದರು.

ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತಿ, ಜಿಲ್ಲಾ ಸ್ವೀಪ್ ಸಮಿತಿ, ವಿಜಯಪುರ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು, ತಾಲೂಕು ಪಂಚಾಯತ ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಎಲ್ಲ ಶಾಲಾ ಕಾಲೇಜುಗಳ ಶಿಕ್ಷಕರು, ಪ್ರಾಂಶುಪಾಲರು ಮತ್ತು ಉಪನ್ಯಾಸಕರು ತರಬೇತಿಯಲ್ಲಿ ಭಾಗವಹಿಸಿದರು.

# ಕುಟುಂಬ ರಾಜಕಾರಣದ ಬಗ್ಗೆ ಬಿಜೆಪಿ ಹೇಳುವುದೆಂದರೆ ಭೂತದ ಬಾಯಿಯಲ್ಲಿ ಭಗವದ್ಗೀತೆ ಉಲಿದಂತೆ: ಶಂಕರಗೌಡ ಪಾಟೀಲ ವ್ಯಂಗ್ಯ

**ಬೆಳಗಾವಿ :** ಭಾರತೀಯ ಜನತಾ ಪಾರ್ಟಿಯವರು ಕುಟುಂಬ ರಾಜ-ಕಾರಣದ ಬಗ್ಗೆ ಮಾತನಾಡುವುದೆಂದರೆ ಭೂತದ ಬಾಯಿಯಲ್ಲಿ ಭಗವದ್ಗೀತೆ ಉಲಿದಂತೆ ಎಂದು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಶಂಕರಗೌಡ ಪಾಟೀಲ ಹೇಳಿದ್ದಾರೆ.




ಕುಟುಂಬ ರಾಜಕಾರಣ ಕುರಿತಂತೆ ಕಾಂಗ್ರೆಸ್ ವಿರುದ್ಧ ಬಿಜೆಪಿ ಕಾರ್ಯಕರ್ತರು ಫ್ಲೆಕ್ಸ್ ಅಳವಡಿಸುತ್ತಿರುವ ಕುರಿತು ಹೇಳಿಕೆ ನೀಡಿರುವ ಅವರು, ರಾಷ್ಟ್ರ ರಾಜಕಾರಣದಿಂದ ಹಳ್ಳಿ ರಾಜಕಾರಣದವರೆಗೂ ಕುಟುಂಬ ರಾಜಕಾರಣವನ್ನೇ ಮಾಡಿಕೊಂಡು ಬರುತ್ತಿರುವ ಬಿಜೆಪಿಯವರಿಗೆ ಈ ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ? ಎಂದು ಪ್ರಶ್ನಿಸಿದ್ದಾರೆ.

ಬಿ.ಎಸ್.ಯಡಿಯೂರಪ್ಪ ಅವರದ್ದು ಕುಟುಂಬ ರಾಜಕಾರಣವಲ್ಲವೇ? ಈಶ್ವರಪ್ಪನವರದ್ದು ಕುಟುಂಬ ರಾಜಕಾರಣವಲ್ಲವೇ? ಬೊಮ್ಮಾಯಿಯವರದ್ದು ಕುಟುಂಬ ರಾಜಕಾರಣವಲ್ಲವೇ? ಉದಾಸಿಯವರದ್ದು ಕುಟುಂಬ ರಾಜಕಾರಣವಲ್ಲವೇ? ಸಿದ್ದೇಶ್ವರ ಅವರದ್ದು ಕುಟುಂಬ ರಾಜಕಾರಣವಲ್ಲವೇ? ಕತ್ತಿಯವರದ್ದು ಕುಟುಂಬ ರಾಜಕಾರಣವಲ್ಲವೇ? ಜಾರಕಿಹೊಳಿಯವರದ್ದು ಕುಟುಂಬ ರಾಜಕಾರಣವಲ್ಲವೇ? ಜೊಲ್ಲೆಯವರದ್ದು ಕುಟುಂಬ ರಾಜಕಾರಣವಲ್ಲವೇ? ಜೊತೆಗೆ, ಕುಟುಂಬ ರಾಜಕಾರಣವನ್ನೇ ಹೊದ್ದು ಮಲಗಿರುವ ಜಾತ್ಯತೀತ ಜನತಾದಳದೊಂದಿಗೆ ಸೇರಿಕೊಂಡು ಚುನಾವಣೆ ಎದುರಿಸುತ್ತಿರುವ ಬಿಜೆಪಿಯವರು ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಅವರು ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.

ಲಕ್ಷ್ಮೀ ಹೆಬ್ಬಾಳಕರ್ ಅವರು ಅತ್ಯಂತ ಕೆಳಮಟ್ಟದಿಂದ ರಾಜಕಾರಣದಲ್ಲಿ ಮೇಲೆ ಬಂದವರು. ಅವರ ಸಹೋದರರಾಗಿರುವ ಚನ್ನರಾಜ ಹಟ್ಟಿಹೊಳಿ ಹಾಗೂ ಮಗ ಮೃಣಾಲ ಹೆಬ್ಬಾಳಕರ್ ಅವರು ಕಳೆದ 10 ವರ್ಷಗಳಿಗಿಂತ ಹೆಚ್ಚಿನ ಸಮಯದಿಂದ ಕಾಂಗ್ರೆಸ್ ನಲ್ಲಿ ನಿಷ್ಠೆಯಿಂದ ಕೆಲಸ ಮಾಡಿದ್ದಾರೆ. ಸ್ವಂತ ಪ್ರತಿಭೆಯಿಂದ, ಹೋರಾಟದಿಂದ ಅವರು ರಾಜಕಾರಣದಲ್ಲಿ ಸ್ಥಾನ ಪಡೆದರೆ ಇದನ್ನು ಕುಟುಂಬ ರಾಜಕಾರಣ ಎನ್ನುವಂತೆ ಬಿಂಬಿಸುವುದು ಮೂರ್ಖತನದ ಪರಮಾವಧಿಯಲ್ಲದೆ ಇನ್ನೇನು ಎಂದು ಶಂಕರಗೌಡ ಪಾಟೀಲ ಪ್ರಶ್ನಿಸಿದ್ದಾರೆ.

ಯಾವುದೇ ರಾಜಕೀಯ, ಸಾಮಾಜಿಕ ಕೆಲಸ ಮಾಡದೆ ಕೇವಲ ಅಪ್ಪನ ಹೆಸರಲ್ಲಿ,
ಅಮ್ಮನ ಹೆಸರಲ್ಲಿ, ಅಣ್ಣನ ಹೆಸರಲ್ಲಿ ಟಿಕೆಟ್ ಪಡೆಯುವ ನೂರಾರು ಜನರು ಬಿಜೆಪಿಯಲ್ಲಿರುವಾಗ, ಕುಟುಂಬದವರ ಹೆಸರಿನ ಮೇಲೆ ಬೇರೆ ಬೇರೆ ಹುದ್ದೆಗಳನ್ನು ಪಡೆಯುವ ಸಾವಿರಾರು ಉದಾಹರಣೆಗಳು ಬಿಜೆಪಿಯ ರಾಷ್ಟ್ರ ರಾಜಕಾರಣದಲ್ಲಿರುವಾಗ ಇಂತಹ ಬ್ಯಾನರ್, ಫ್ಲೆಕ್ಸ್ ಅಳವಡಿಸಿ ಬಿಜೆಪಿ ಅಪಹಾಸ್ಯಕ್ಕೀಡಾಗುತ್ತಿದೆ. ಬಿಜೆಪಿ ಮುಖಂಡರೆ ತಲೆತಗ್ಗಿಸುವಂತಾಗಿದೆ ಎಂದು ಅವರು ವ್ಯಂಗ್ಯವಾಡಿದ್ದಾರೆ.

# ಬಡವರ ಹಸಿವು ನೀಗಿಸುತ್ತಿರುವ ಗ್ಯಾರಂಟಿ ಯೋಜನೆಗಳು: ಲಕ್ಷ್ಮೀ ಹೆಬ್ಬಾಳಕರ್

## ಕಾಂಗ್ರೆಸ್ ಪಕ್ಷದಿಂದ ಮಾತ್ರ ಅಭಿವೃದ್ಧಿ: ಗ್ಯಾರಂಟಿ ಯೋಜನೆಗಳ ಸಮಾವೇಶದಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿಕೆ

**ಸವದತ್ತಿ (ಬೆಳಗಾವಿ) :** ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಾರಥ್ಯದ ಕಾಂಗ್ರೆಸ್ ಸರ್ಕಾರ ಸರ್ವ ಜನಾಂಗದ ಅಭಿವೃದ್ಧಿಗೆ ಶ್ರಮಿಸುತ್ತಿದ್ದು, ಶ್ರಮಿಕರ ಅಭಿವೃದ್ಧಿಗಾಗಿ ಜಾರಿಗೆ ತರಲಾಗಿರುವ ಪಂಚ ಗ್ಯಾರಂಟಿ ಯೋಜನೆಗಳ ಉದ್ದೇಶ ಯಶಸ್ವಿಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದ್ದಾರೆ.



ಬೆಳಗಾವಿ ಜಿಲ್ಲೆಯ ಸವದತ್ತಿಯ ತಾಲೂಕು ಗುರು ಭವನದಲ್ಲಿ ಶುಕ್ರವಾರ ನಡೆದ ಗ್ಯಾರಂಟಿ ಯೋಜನೆಗಳ ಸಮಾವೇಶದಲ್ಲಿ ಮಾತನಾಡಿದ ಸಚಿವರು, ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಕೊಟ್ಟ ಮಾತಿನಂತೆ ಅಧಿಕಾರಕ್ಕೆ ಬಂದ ಕೇವಲ 100 ದಿನಗಳಲ್ಲಿ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದಿದೆ ಎಂದರು.

ಕೊರೋನಾ ಮಾರಿಯಿಂದ ಸಂಕಷ್ಟಕ್ಕೆ ಸಿಲುಕಿದ್ದ ಜನರು ಬೆಲೆ ಏರಿಕೆಯಿಂದಾಗಿ ತತ್ತರಿಸಿದ್ದರು. ಇಂಥ ಜನರ ಅನುಕೂಲಕ್ಕಾಗಿ ಕಾಂಗ್ರೆಸ್ ಪಕ್ಷ ಪಂಚ ಗ್ಯಾರಂಟಿಗಳನ್ನು ಘೋಷಿಸಿತ್ತು. ಪಕ್ಷಾತೀತವಾಗಿ, ಯಾವುದೇ ಭೇದಭಾವ ಇಲ್ಲದೆ, ಮಧ್ಯವರ್ತಿಗಳ ಹಾವಳಿ ಇಲ್ಲದೆ ನಮ್ಮ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪುತ್ತಿವೆ ಎಂದು ಸಚಿವರು ಹೇಳಿದರು.

ಜನರ ನೆಮ್ಮದಿಗಾಗಿ ಕಾರ್ಯರೂಪಕ್ಕೆ ತರಲಾದ ಈ ಯೋಜನೆಗಳು ಇಂದು ಮನೆ ಮನೆಗೆ ತಲುಪಿವೆ. ಸರ್ಕಾರ ಜಾರಿಗೆ ತಂದ ಯೋಜನೆಗಳಿಂದ ಕೂಲಿ ಕಾರ್ಮಿಕರು, ಕಡು ಬಡವರಿಗೆ ಅನುಕೂಲವಾಗಿದೆ ಎಂದು ಹೇಳಿದರು.

ಸವದತ್ತಿ ಯಲ್ಲಮ್ಮ ಹಾಗೂ ನನ್ನ ತಂದೆತಾಯಿಗಳ ಆಶೀರ್ವಾದ, ಬೆಳಗಾವಿ ಗ್ರಾಮೀಣ ಕ್ಷೇತ್ರದ ಜನತೆಯ ಬೆಂಬಲದಿಂದಾಗಿ ಇಂದು ಸಚಿವೆಯಾಗಿರುವೆ. ವಾರ್ಷಿಕ 34 ಸಾವಿರ ಕೋಟಿ ಬಜೆಟ್ ಇರುವ ಗೃಹಲಕ್ಷ್ಮೀ ಯೋಜನೆಯನ್ನು ಜಾರಿಗೆ ತರುವ ಅದೃಷ್ಟ ನನ್ನ ಪಾಲಿಗೆ ಬಂತು ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಸವದತ್ತಿ ಕ್ಷೇತ್ರಕ್ಕೆ ಗೃಹಲಕ್ಷ್ಮೀ ಯೋಜನೆಗಾಗಿ ತಿಂಗಳಿಗೆ 15.99 ಕೋಟಿ ರೂಪಾಯಿ ನೀಡಲಾಗ್ತಿದೆ. ಒಂದು ವರ್ಷ ವರ್ಷಕ್ಕೆ 192 ಕೋಟಿ ನೀಡಲಾಗುತ್ತದೆ. ಐದು ವರ್ಷಕ್ಕೆ ಸಾವಿರ ಕೋಟಿಗಿಂತ ಹೆಚ್ಚು ಆಗುತ್ತದೆ. ಬಡವರಿಗಾಗಿ ಸಿದ್ದರಾಮಯ್ಯ ಇಂಥ ಉಪಯುಕ್ತ ಯೋಜನೆಯನ್ನು ಜಾರಿಗೆ ತಂದಿದ್ದಾರೆ. ಮೋದಿ, ಬಿಜೆಪಿಯವರು ಮಾಡದಂತ ಕೆಲಸವನ್ನು ಸಿದ್ದರಾಮಯ್ಯ ಮಾಡಿ ತೋರಿಸಿದ್ದಾರೆ ಎಂದು ಹೇಳಿದರು.

ಮೋದಿ ಯಾವುದೇ ಕಾರ್ಯಕ್ರಮಗಳನ್ನು ಮಾಡಿದರೂ ಅಂಬಾನಿ, ಅದಾನಿಯಂತ ಶ್ರೀಮಂತರಿಗಾಗಿ ಮಾತ್ರ ಮಾಡುತ್ತಾರೆ. ಕಾಂಗ್ರೆಸ್ ಪಕ್ಷದ ಸಿದ್ದರಾಮಯ್ಯ, ಲಕ್ಷ್ಮೀ ಹೆಬ್ಬಾಳ್ಕರ್ ಯಾವುದೇ ಯೋಜನೆಗಳನ್ನು ಜಾರಿಗೆ ತಂದರೂ ರೈತರಿಗೆ, ಬಡವರಿಗಾಗಿ ಮಾತ್ರ. ಅಭಿವೃದ್ಧಿ ಕೆಲಸಗಳು ಕೇವಲ ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು. ಕಾಂಗ್ರೆಸ್ ಸರ್ಕಾರ ಇರುವವರೆಗೂ ನಮ್ಮ ಯೋಜನೆಗಳು ನಿಲ್ಲುವುದಿಲ್ಲ. ಬಿಜೆಪಿಯವರು ಯೋಜನೆಗಳ ಬಗ್ಗೆ ಅನಾವಶ್ಯಕವಾಗಿ ಅಪಪ್ರಚಾರ ಮಾಡುತ್ತಿದ್ದಾರೆ. ಇಂಥ ಊಹಾಪೋಹಗಳಿಗೆ ಕಿವಿಗೊಡದೆ ಸರ್ಕಾರವನ್ನು ಮುಂದಿನ ದಿನಗಳಲ್ಲೂ ಆಶೀರ್ವದಿಸಿ ಎಂದು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ಈ ಭಾಗದ ಶಾಸಕರಾದ ವಿಶ್ವಾಸ್ ವೈದ್ಯ, ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ ಹಟ್ಟಿಹೊಳಿ ಮೊದಲಾದವರು ಮಾತನಾಡಿದರು.

ಯುವ ಕಾಂಗ್ರೆಸ್ ಮುಖಂಡ ಮೃಣಾಲ್ ಹೆಬ್ಬಾಳ್ಕರ್, ತಹಶಿಲ್ದಾರ್ ಮಧುಸೂದನ್ ಕುಲಕರ್ಣಿ, ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿ ಯಶವಂತಕುಮಾರ್, ಬೈಲಹೊಂಗಲ ಎ.ಸಿ. ಪ್ರಭಾವತಿ,
ಸಿಡಿಪಿಓ ಸುನಿತಾ, ಆರ್.ವಿ.ಪಾಟೀಲ, ಡಿ ಡಿ ಟೋಪೋಜಿ, ಮಲ್ಲು ಜಕಾತಿ, ಉಮೇಶ ಬಾಳಿ, ಚಂದು ಜಂಬಳಿ, ಮಹಾರಾಜಗೌಡ ಪಾಟೀಲ, ರಾಮನಗೌಡ ತಿಪ್ಪರಾಶಿ, ತಾಲೂಕಿನ ಫಲಾನುಭವಿಗಳು ಉಪಸ್ಥಿತರಿದ್ದರು.

# ಭಾಗ್ಯನಗರ: ಕನ್ನಡ ಭಾಷೆ ನಾಮಫಲಕಗಳ ಅಳವಡಿಕೆಗೆ ಸೂಚನೆ

**ಕೊಪ್ಪಳ:** ಭಾಗ್ಯನಗರಪಟ್ಟಣಪಂಚಾಯತಿವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಮಳಿಗೆಗಳಲ್ಲಿ ಕಡ್ಡಾಯವಾಗಿ ಕನ್ನಡ ಭಾಷೆ ನಾಮಫಲಕಗಳನ್ನು ಬಳಸಬೇಕು.

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ (ತಿದ್ದುಪಡಿ) ವಿಧೇಯಕ – 2024ರ ಪ್ರಕಾರ ಭಾಗ್ಯನಗರ ವ್ಯಾಪ್ತಿಯಲ್ಲಿಬರುವಎಲ್ಲಾವಾಣಿಜ್ಯಮಳಿಗೆಗಳಮೇಲೆ ಪ್ರದರ್ಶಿಸುವ ನಾಮಫಲಕಗಳಲ್ಲಿ ಕನ್ನಡ ಭಾಷೆಯು ಶೇ.60 ರಷ್ಟಿರಬೇಕು ಹಾಗೂ ಕನ್ನಡ ಭಾಷೆಯು ನಾಮಫಲಕದ ಮೇಲ್ಭಾಗದಲ್ಲಿರಬೇಕು. ಮಾಲೀಕರು ದಪ್ಪ ಅಕ್ಷರದಲ್ಲಿ ಕಾಣುವಂತೆ ಕನ್ನಡ ಶಬ್ದಗಳನ್ನು ಬಳಸಿ ಫಲಕವನ್ನು ಪ್ರದರ್ಶಿಸುವುದು ಕಡ್ಡಾಯವಾಗಿದೆ. ಈ ನಿಯಮ ಉಲ್ಲಂಘಿಸಿದ್ದು ಕಂಡು ಬಂದರೆ ಉದ್ಯಮ ಪರವಾನಿಗೆಯನ್ನು ರದ್ದುಪಡಿಸಿ ನಿಯಮಾನುಸಾರ ಕ್ರಮಕೈಗೊಳ್ಳಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ಸಮಯದಲ್ಲಿ ಪಟ್ಟಣ ಪಂಚಾಯತ ಕಾರ್ಯಾಲಯವನ್ನು ಸಂಪರ್ಕಿಸಬಹುದು ಎಂದು ಭಾಗ್ಯನಗರಪಟ್ಟಣಪಂಚಾಯತಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕೊಪ್ಪಳ, ಗಂಗಾವತಿ, ಕಲಬುರಗಿ, ಬೀದರ್ ಮಾರ್ಗಕ್ಕೆ ನೂತನ ಸಾರಿಗೆ ಆರಂಭ

**ಕೊಪ್ಪಳ :** ಕೊಪ್ಪಳ ಜಿಲ್ಲೆಯ ಜನಪ್ರತಿನಿಧಿಗಳು, ಸಾರ್ವಜನಿಕ ಪ್ರಯಾಣಿಕರ ಬೇಡಿಕೆಯ ಮೇರೆಗೆ ಕಲ್ಯಾಣ ಕನಾಟಕ ರಸ್ತೆ ಸಾರಿಗೆ ನಿಗಮದಿಂದ ಕೊಪ್ಪಳ, ಗಂಗಾವತಿ, ಕಲಬುರಗಿ, ಬೀದರ್ ಮಾರ್ಗದಲ್ಲಿ ನೂತನ ಪ್ರತಿಷ್ಠಿತ ರಾತ್ರಿ ಸಾರಿಗೆಯನ್ನು (ನಾನ್ ಎಸಿ ಸ್ಲೀಪರ್) ಪ್ರಾರಂಭಿಸಲಾಗಿದೆ.

ಸಾರಿಗೆ ಕಾರ್ಯಾಚರಣೆ ಸಮಯ: ಕಲ್ಯಾಣ ಕನಾಟಕ ರಸ್ತೆ ಸಾರಿಗೆ ನಿಗಮದಿಂದ ನಾನ್ ಎಸಿ ಸ್ಲೀಪರ್ ವಾಹನವು ಕೊಪ್ಪಳದಿಂದ 20.30 ಗಂಟೆಗೆ ಹಾಗೂ ಗಂಗಾವತಿಯಿಂದ 4.15 ಮತ್ತು 21.45ಕ್ಕೆ ಹೊರಡಲಿದ್ದು, ಕಲಬುರಗಿಗೆ 3.45ಕ್ಕೆ, ಬೀದರ್‌ಗೆ 6.45ಕ್ಕೆ ತಲುಪಲಿದೆ. ಕಲಬುರಗಿಯಿಂದ 22 ಮತ್ತು 4 ಗಂಟೆಗೆ ಹಾಗೂ ಬೀದರ್‌ದಿಂದ 18.30ಕ್ಕೆ ಹೊರಡಲಿರುವ ವಾಹನಗಳು ಗಂಗಾವತಿಗೆ 4 ಮತ್ತು 21.30ಕ್ಕೆ, ಕೊಪ್ಪಳಕ್ಕೆ 5.15ಕ್ಕೆ ತಲುಪಲಿದೆ.

ಕೊಪ್ಪಳ, ಗಂಗಾವತಿ, ಕಲಬುರಗಿ, ಬೀದರ್ ಮಾರ್ಗದ ಸಾರಿಗೆಗೆ ಮುಂಗಡ ಟಿಕೆಟ್ ಬುಕ್ ಮಾಡಲು ಸಂಸ್ಥೆಯ ಅಧಿಕೃತ ವೆಬ್‌ಸೈಟ್ ತಿತಿತಿ. ಇಡಿಣಛಿ.ಟಿಟ ನಲ್ಲಿ ಹಾಗೂ ಕಲ್ಯಾಣ ಕನಾಟಕ ರಸ್ತೆ ಸಾರಿಗೆ ನಿಗಮ ಕೊಪ್ಪಳ ವಿಭಾಗದ ಕೊಪ್ಪಳ, ಗಂಗಾವತಿ, ಕುಷ್ಟಗಿ, ಯಲಬುರ್ಗಾಗಳ ಮುಂಗಡ ಬುಕ್ಕಿಂಗ್ ಕೌಂಟರ್‌ಗಳಲ್ಲಿ ಮುಂಗಡ ಟಿಕೆಟ್ ಬುಕ್ ಮಾಡಬಹುದಾಗಿದೆ.

ಸಾರ್ವಜನಿಕ ಪ್ರಯಾಣಿಕರು ಈ ಸಾರಿಗೆ ಸೌಲಭ್ಯದ ಸದಪಯೋಗ ಪಡೆದುಕೊಳ್ಳುವಂತೆ ಕಲ್ಯಾಣ ಕನಾಟಕ ರಸ್ತೆ ಸಾರಿಗೆ ನಿಗಮದ ಕೊಪ್ಪಳ ವಿಭಾಗೀಯ ನಿಯಂತ್ರಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಶ್ವ ಗ್ರಾಹಕರ ದಿನಾಚರಣೆ

# "ಗ್ರಾಹಕ ಮಿತ್ರ" ಸರಣಿ ಉಪನ್ಯಾಸ ಮಾಲಿಕೆ

**ಬೆಳಗಾವಿ :** ಗ್ರಾಹಕರಿಗೆ ಸಿಗಬೇಕಾದ ಹಕ್ಕುಗಳ ಬಗ್ಗೆ ಅರಿವು ಮೂಡಿಸಿ ಪ್ರತಿಯೊಬ್ಬ ಗ್ರಾಹಕನು ಗೌರವಯುತ ಜೀವನ ನಿರ್ವಹಿಸಲು ಸಜ್ಜುಗೊಳಿಸುವ ಉದ್ದೇಶದಿಂದ ನಮ್ಮೂರ ಬಾನುಲಿ ಸಮುದಾಯ ರೇಡಿಯೋ ಕೇಂದ್ರ ವಿಶ್ವ ಗ್ರಾಹಕರ ದಿನಾಚರಣೆ ಸಂದರ್ಭದಲ್ಲಿ ಪ್ರಾರಂಭಿಸಿರುವ "ಗ್ರಾಹಕ ಮಿತ್ರ" ಸರಣಿ ಉಪನ್ಯಾಸ ಮಾಲಿಕೆ ಗ್ರಾಹಕ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಲಿದೆ ಎಂದು ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕ ವ್ಯವಹಾರ ಇಲಾಖೆ ಬೆಳಗಾವಿಯ ಜಂಟಿ ನಿರ್ದೇಶಕ, ಶ್ರೀ ಶ್ರೀಶೈಲ್ ಕಂಕಣವಾಡಿ ಅಭಿಪ್ರಾಯ ಪಟ್ಟರು.

ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರದ ಸಂಯೋಜಕ ಎಂ. ಎಂ. ಗಡಗಲಿ ಮಾತನಾಡಿ ವಿವಿಧ ಗ್ರಾಹಕ ವಿಷಯಗಳಾದ ಹಕ್ಕುಗಳು, ಕರ್ತವ್ಯಗಳು, ಗುಣಮಟ್ಟದ ಅರಿವು, ತಪ್ಪು ಜಾಹಿರಾತುಗಳು, ದೂರು ನೀಡುವ ಬಗ್ಗೆ, ರಶೀದಿ ಬೇಡಿಕೆ, ಮುಂತಾದವುಗಳ ಬಗ್ಗೆ "ಗ್ರಾಹಕ ಮಿತ್ರ" ಉಪನ್ಯಾಸ ಮಾಲಿಕೆ ಬಿತ್ತರಿಸಲಿದೆ ಎಂದರು.

ಮಹಿಳಾ ಕಲ್ಯಾಣ ಸಂಸ್ಥೆಯ ಸಂಯೋಜಕ ಎಂ.ಎಸ್.ಚೌಗಲಾ, ಆರ್ ಜೆ ಚೇತನ್, ಆರ್ ಜೆ ಮೀರಾ ಭಾಗವಹಿಸಿದ್ದರು.

# ಮಹಿಳೆಯರಿಂದಲೇ ಮಹಿಳಾ ಶೋಷಣೆ

**ರಬಕವಿ :** ಇಲ್ಲಿಯ ಓಂಕಾರೇಶ್ವರ ಸೇವಾ ಸಮರ್ಪಣಾ ಮಹಿಳಾ ಸಮಿತಿಯ ವತಿಯಿಂದ ಮುತ್ತೂರ ಓಣಿಯಲ್ಲಿನ ಸಂಘದ ಕಾರ್ಯಾಲಯದಲ್ಲಿ ಇತ್ತೀಚೆಗೆ ಮಹಿಳಾ ದಿನಾಚರಣೆ ಆಚರಿಸಲಾಯಿತು. ಸಸಿಗೆ ನೀರೆರೆಯುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಸಂಘದ ಅಧ್ಯಕ್ಷೆ ಶ್ರೀಮತಿ ಜಯಶ್ರೀ ಬಾಗಲಕೋಟ ಅವರು, ಮಹಿಳೆ ಸಬಲೆ ಅಬಲೆಯಲ್ಲ ಎನ್ನುವುದನ್ನು ಮೊದಲು ನಾವು ಅರಿಯಬೇಕು. ಮನೆಯವರೆಲ್ಲರ ಮನಸ್ಸನ್ನು ಗೆದ್ದು ಯಾವುದೇ ಸೊಕ್ಕು ಸೆಡವು ಮಾಡದೇ ಶಿವಂ ಭಾವದಿಂದ ಕಾಯಕ ಮಾಡಬೇಕು. ಸಣ್ಣ ಪುಟ್ಟ ಉದ್ಯೋಗ ಮಾಡುತ್ತ ಅನೇಕ-ರಿಗೆ ಉಪಜೀವನ ಒದಗಿಸಬಹುದು. ಇಂದಿನ ಆಧುನಿಕತೆಯ ಭರಾಟೆಯಲ್ಲಿ ಮಹಿಳೆಯರು ಎಲ್ಲಾ ರಂಗಗಳಲ್ಲೂ ಪ್ರಗತಿ ಹೊಂದುತ್ತಿದ್ದಾರೆ. ಹನ್ನೆರಡನೆಯ ಶತಮಾನದಲ್ಲಿಯೇ ಬಸವಣ್ಣನವರು ಹೆಣ್ಣು ಗಂಡು ಎಂಬ ಭೇದ ಭಾವ ಮಾಡದೇ ಎಲ್ಲರಿಗೂ ಸಮಾನವಾದ ಅವಕಾಶ



ಕಲ್ಪಿಸಿದ್ದರು. ಇಂದು ಮಹಿಳೆಯಿಂದಲೇ ಮಹಿಳೆಯ ಶೋಷಣೆ ಆಗುತ್ತಿದೆ. ಇದು ನಿಲ್ಲಬೇಕು. ಹೆಣ್ಣು ಮಗು ಹುಟ್ಟಿತೆಂದು ಮೂಗು ಮುರಿಯಬಾರದು ಎಂದರು.

ಈ ಸಂದರ್ಭದಲ್ಲಿ ಜೀವವಿಮಾ ಪ್ರತಿನಿಧಿ ಶ್ರೀಮತಿ ಅನಸುಯಾ ಹಿರೇಮಠ, ಸರ್ಕಾರಿ ಪ್ರಾಥಮಿಕ ಶಾಲೆಯ ಮುಖ್ಯಾಧ್ಯಾಪಕಿ ಶ್ರೀಮತಿ ಭಾರತಿ ಪತ್ತಾರ ಮಾತನಾಡಿದರು. ವಿವಿಧ ಆಟಗಳನ್ನು ಹಾಗೂ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಪ್ರಾರಂಭದಲ್ಲಿ ಶ್ರೀಮತಿ ದೀಪಾ ಬಾಗಲಕೋಟಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಸುನಿತಾ ತೆಗ್ಗಿ, ಮಹಾನಂದಾ ಬಾಗಲಕೋಟಮಠ, ಗಂಗೂಬಾಯಿ ಪತ್ತಾರ, ಲತಾ ಮುಳೆ, ದಾನಮ್ಮ ಹಿರೇಮಠ, ವಿಜು ಜೋತಾವರ, ಸಂಗೀತಾ ಜೋತಾವರ, ಪ್ರಿಯಾಂಕಾ ಬಾಗಲಕೋಟಮಠ, ಸಾವಿತ್ರಿ ಜಿಗಜಿನ್ನಿ, ಪ್ರಭಾವತಿ ಮುತ್ತೂರ, ಅಮೃತಾ ಶಿರಗಾಂವಿ, ಸುರೇಖಾ ಅಮ್ಮಣಗಿಮಠ, ಪಾರ್ವತಿ ಪಾಟೀಲ ಹಾಗೂ ಇನ್ನೂ ಅನೇಕರು ಉಪಸ್ಥಿತರಿದ್ದರು. ಕೊನೆಯಲ್ಲಿ ಪ್ರೇಮಾ ಹಿರೇಮಠ ವಂದಿಸಿದರು.

# ಬಣಜಿಗರು ಸರ್ವರೊಡನೆ ಸಹಜೀವನ ನಡೆಸುವವರು

**ರಬಕವಿ-ಬನಹಟ್ಟಿ :** ಎಲ್ಲ ಬಲ್ಲವ ಬಣಜಿಗ ಎಂದು ಸರ್ವಜ್ಞ ಮಹಾಕವಿಯಿಂದ ಬಿರುದಾಂಕಿತಗೊಂಡ ಸಮುದಾಯವೇ ಬಣಜಿಗ ಸಮಾಜವಾಗಿದ್ದು, ಎಲ್ಲ ಸಮಾಜಗಳ ಜನರೊಡನೆ ಸೌಹಾರ್ದತೆಯಿಂದ ವ್ಯವಹರಿಸಿ, ಸರ್ವರೊಡನೆ ಸಹಕಾರಯುತ ಸಹಜೀವನ ನಡೆಸುವ ಮೂಲಕ ಸಮಾಜಕ್ಕೆ ತನ್ನದೇಯಾದ ಕೊಡುಗೆಯನ್ನು ಬಣಜಿಗ ಸಮಾಜ ನೀಡಿದೆ ಎಂದು ನೀಲಕಂಠ ಗೌರಿಹರ ಮುತ್ತೂರ ನುಡಿದರು.



ರಬಕವಿಯ ಬಣಜಿಗ ಸಮಾಜವು ಬಾಗೋಜಿಮಠದಲ್ಲಿ ಆಯೋಜಿಸಿದ್ದ ಶ್ರೀನಿಧಿ ಸಂಸ್ಥೆಗೆ ಇತ್ತೀಚೆಗೆ ಅವಿರೋಧವಾಗಿ ಆಯ್ಕೆಗೊಂಡ ಸಮಾಜದ ಎಲ್ಲ ಎಂಟು ಜನ ನಿರ್ದೇಶಕರ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸಂಸ್ಕೃತಿ ಮತ್ತು ಸಹಬಾಳ್ವೆಗೆ ಬಣಜಿಗರು ಮುಂದಿದ್ದು , ಎಲ್ಲ ವರ್ಗದ ಜನರೊಡನೆ ಸದಾಶಯದೊಡನೆ ಬೆರೆತು ಸರ್ವರ ಅಭ್ಯುದಯಕ್ಕೆ ಶ್ರಮಿಸುವ ಜನಾಂಗವಾಗಿ ಮುಂಚೂಣಿಯಲ್ಲಿದೆ ಎಂದರು. ನಗರ ಘಟಕದ ಅಧ್ಯಕ್ಷ ಗಿರೀಶ ಮುತ್ತೂರ ಮಾತನಾಡಿ ಸಮಾಜದ ಬಹುತೇಕರು ಆರ್ಥಿಕವಾಗಿ ಸಬಲರಿದ್ದು , ಆರ್ಥಿಕವಾಗಿ ದುರ್ಬಲವಿರುವ ಜನರಿಗೆ ನೆರವಾಗಬೇಕು. ಸಮಾಜದ ಸಮುದಾಯ ಭವನ ನಿರ್ಮಾಣ-ಕ್ಕೆ ನಾವು ಯಾವುದೇ ದಾಕ್ಷಿಣ್ಯಕ್ಕೀಡಾಗದೇ ಸ್ವಾಭಿಮಾನದಿಂದ ಮುಂದಾಗಿದ್ದು , ನಮಗೆ ನಿವೇಶನ ನೀಡಲು ಸರ್ಕಾರಕ್ಕೆ ಅವಕಾಶವಿಲ್ಲದ ಕಾರಣ ವಿಳಂಬವಾಗಿದೆ. ಸೂಕ್ತ ನಿವೇಶನ ಪಡೆಯಲು ನಾವು ನಿರಂತರ ಯತ್ನಿಸುತ್ತಿದ್ದು , ಬರುವ ದಿನಗಳಲ್ಲಿ ಸಮಾಜದ ಸದಸ್ಯರ ಮತ್ತು ಸಂಘ-ಸಂಸ್ಥೆಗಳ ನೆರವಿನಲ್ಲಿ ನಮ್ಮದೇ ಸಮುದಾಯ ಭವನ ಸಿದ್ಧವಾಗಲಿದೆ ಎಂದರು. ಸಂಘಟಿತರಾಗುವ ಮೂಲಕ ಮತ್ತು ಮಾಸಿಕವಾಗಿ ಒಂದು ಬಾರಿಯಾದರೂ ಸಮಾಜ ಬಾಂಧವರು ಒಂದೆಡೆ ಬೆರೆತರೆ ಹೊಸ ಚಿಂತನೆಗಳು ಮೂಡಿ ನಗರದ ಅಭಿವೃದ್ಧಿಯೂ ಸೇ-ರಿದಂತೆ ಎಲ್ಲ ಕಾರ್ಯಗಳಲ್ಲೂ ನಾವು ಭಾಗಿಯಾಗಲು ಸಾಧ್ಯವಾಗುತ್ತದೆಂದರು.

ಡಿ. ಕೆ. ಕೊಟ್ರಶೆಟ್ಟಿ ಫೌಂಡೇಶನ್ನಿನ ಸೋಮಶೇಖರ ಕೊಟ್ರಶೆಟ್ಟಿ ಮಾತನಾಡಿ, ಬಣಜಿಗರು ಸ್ವಾಭಿಮಾನಿಗಳು. ಆದ-ರೆ ದುರಹಂಕಾರಿಗಳಲ್ಲ. ಪ್ರತಿ ಸಮುದಾಯದೊಡನೆ ಉತ್ತಮ ಸಂಬಂಧವಿ-ರಿಸಿಕೊಂಡು ಸರ್ವರ ಅಭಿವೃದ್ಧಿಗೆ ಶ್ರಮಿಸುವ ಗುಣಧರ್ಮ ಹೊಂದಿದ್ದೇವೆ. ಸಹಕಾರಿ ಸಂಸ್ಥೆಯು ಅಬಾಧಿತವಾಗಿ ನಡೆದುಕೊಂಡು ಹೋಗಲು ಮತ್ತು ಎಲ್ಲ ಸಮುದಾಯದ ಜನತೆಗೂ ಆರ್ಥಿಕ ನೆರವು ಕಲ್ಪಿಸುವ ಮೂಲಕ ಶ್ರೀನಿಧಿ ಸಾರ್ವಜನಿಕ ಮನ್ನಣೆಯ ಸಂಸ್ಥೆಯಾಗಿದೆ. ಆಡಳಿತ ಮಂಡಳಿಗೆ ಸಂಸ್ಥೆಯನ್ನು ಉಳಿಸಿಕೊಂಡು ಮತ್ತು ಬೆಳೆಸಿಕೊಂಡು ಹೋಗುವ ಹೊಣೆಗಾ-ರಿಕೆಯಿದ್ದು , ಅದಕ್ಕೆ ಚ್ಯುತಿ ಬರದಂತೆ ನಿರ್ದೇಶಕರು, ಸಿಬ್ಬಂದಿ ವರ್ಗ ಶ್ರಮಿಸಲು ಪ್ರಾಮಾಣಿಕ, ಪಾರದರ್ಶಕ ಆಡಳಿತವೇ ಕಾರಣವೆಂದರು.

ನೂತನ ನಿರ್ದೇಶಕರಾದ ಅಂದಾನಿ ಮುತ್ತೂರ, ಉದಯಕುಮಾರ ಜಿಗಜಿನ್ನಿ, ಬಸವರಾಜ ತೆಗ್ಗಿ, ವಿಜಯ ನಾಶಿ, ರವಿ ಮುತ್ತೂರ ಇವರನ್ನು ಸನ್ಮಾನಿಸಲಾಯಿತು.

ಉಮೇಶ ಹನಗಂಡಿ, ವಿಜಯಕುಮಾರ ಹಲಕುರ್ಕಿ, ಪ್ರಭು ಢಪಳಾಪೂರ, ಸಂ-ಜಯ ತೆಗ್ಗಿ, ಸಂಜಯ ಮುತ್ತೂರ, ಚಂದ್ರಶೇಖರ ಹುಲಗಬಾಳಿ, ಬಸವರಾಜ ಕುಂಚನೂರ, ನೀಲಕಂಠ ಬಾಗೇವಾಡಿ, ಗಜಾನನ ತೆಗ್ಗಿ, ಪರಮಶೆಟ್ಟಿ ಮುಂತಾದವರು ಪಾಲ್ಗೊಂಡಿದ್ದರು. ಮಲ್ಲಿಕಾರ್ಜುನ ಗಡೆನ್ನವರ ಕಾರ್ಯಕ್ರಮವನ್ನು ಸೊಗಸಾಗಿ ನಿರ್ವಹಿಸಿದರು.

# ಲೋಕ ಅದಾಲತ್‌ನಿಂದ ಕಕ್ಷಿದಾರರಿಗೆ ಅನುಕೂಲ: ಕಿರಣಕುಮಾರ ವಡಗೇರಿ

**ರಬಕವಿ-ಬನಹಟ್ಟಿ :** ಲೋಕ ಅದಾಲತ್‌ನಲ್ಲಿ ವ್ಯಾಜ್ಯಗಳಿಗೆ ಪರಿಹಾರಗಳನ್ನು ಕಂಡು ಕೊಳ್ಳುವುದರಿಂದ ಕಕ್ಷಿದಾರರಿಗೆ ಬಹಳಷ್ಟು ಅನುಕೂಲವಾಗಲಿದೆ. ಲೋಕ ಅದಲಾತ್ ನಲ್ಲಿ ವ್ಯಾಜ್ಯಗಳಿಗೆ ಪರಿಹಾರ ಕಂಡುಕೊಂಡು, ಮುಂದಿನ ದಿನಗಳಲ್ಲಿ ಕಕ್ಷಿದಾರರು ಪರಸ್ಪರ ಸೌಹಾರ್ದಯುತವಾದ ಜೀವನವನ್ನು ಸಾಗಿಸಬಹುದಾಗಿದೆ ಎಂದು ಇಲ್ಲಿನ ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶ ಕಿರಣ-ಕುಮಾರ ವಡಗೇರಿ ತಿಳಿಸಿದರು.



ಅವರು ಶನಿವಾರ ಇಲ್ಲಿನ ನ್ಯಾಯಾಲಯದಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಲೋಕ ಅದಾಲತ್ ಕಾರ್ಯಕ್ರಮಗಳು ಯಶಸ್ವಿಯಾಗಬೇಕಾದರೆ ವಕೀಲರ ಮತ್ತು ಕಕ್ಷಿದಾರರ ಸಹಕಾರ ಬಹಳಷ್ಟು ಮುಖ್ಯವಾಗಿದೆ. ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಲಯದಲ್ಲಿ 195 ಪ್ರಕರಣಗಳಲ್ಲಿ 110 ಪ್ರಕರಣಗಳು ಇತ್ಯರ್ಥಗೊಂಡಿದ್ದು , ರೂ. 2,12,90,059 ಪರಿಹಾರಕ್ಕೆ ಆದೇಶ ಮಾಡಲಾಯಿತು ಎಂದು ನ್ಯಾಯಾಧೀಶ ಕಿರಣಕುಮಾರ ವಡಗೇರಿ ತಿಳಿಸಿದರು.

ಕಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶೆ ಸುಷ್ಮಾ ಟಿ. ಸಿ. ಮಾತನಾಡಿ, ಕಿರಿಯ ಶ್ರೇಣಿಯ ನ್ಯಾಯಾಲಯದಲ್ಲಿ 1045 ಪ್ರಕರಣಗಳಲ್ಲಿ 932 ಪ್ರಕರಣಗಳು ಇತ್ಯರ್ಥಗೊಂಡಿದ್ದು , ರೂ. 1,35,01,282 ಪರಿಹಾರ ಧನವನ್ನು ನೀಡಲಾಯಿತು ಎಂದು ತಿಳಿಸಿದರು.

ವಕೀಲರ ಸಂಘದ ಅಧ್ಯಕ್ಷ ಶ್ರೀಕಾಂತ ಕುಲಕರ್ಣಿ, ಕಾರ್ಯದರ್ಶಿ ಎ. ಜಿ. ಸಲಬನ್ನವರ,
ಸಹ ಕಾರ್ಯದರ್ಶಿ ಪಿ. ಜಿ. ಪಾಟೀಲ, ಎಂ.ಜಿ. ಕೆರೂರ, ಅರವಿಂದ ವ್ಯಾಸ, ಕೆ. ಜಿ. ಸಾಲ್ಗುಡೆ, ಶಿವಕುಮಾರ ಷಣ್ಮುಖ, ಮಹಾಂತೇಶ ಪದಮಗೊಂಡ, ಕೆ. ಎಂ. ಕೋಪರ್ಡೆ, ರಾಘವೇಂದ್ರ ಗೊಳಸಂಗಿ, ಅಶ್ವಿನಿ ಹಾರೂಗೇರಿ, ಎಲ್. ಆರ್. ಭದ್ರನವರ, ಬಸವರಾಜ ಕುಂಬಾರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಬನಹಟ್ಟಿಯಲ್ಲಿ ಶರಣರ ಅನುಭಾವ ದರ್ಶನ

**ರಬಕವಿ-ಬನಹಟ್ಟಿ :** ಶರಣರ ವಚನಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡಾಗ ಸದೃಢ ಸಮಾಜ ನಿರ್ಮಾಣವಾಗುವುದೆಂದು ಬಸವ ಬೆಳವಿಯ ಚರಂತೇಶ್ವರ ಮಠದ ಶರಣಬಸವ ದೇವರು ಹೇಳಿದರು. ನಗರದ ಈಶ್ವರಲಿಂಗ ಮೈದಾನದಲ್ಲಿ ಶ್ರೀ ಮಹಾಂತ ಮಂದಾರ ಮಠದಿಂದ ಜರುಗುತ್ತಿರುವ ಶರಣರ ಅನುಭಾವ ದರ್ಶನ ಹಾಗೂ ದಂಪತಿಗಳ ಬೆಳ್ಳಿ ಮಹೋತ್ಸವದ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಸ್ತ್ರೀ ಸಮಾನತೆಗೆ ಅವಕಾಶ ನೀಡುವುದರ ಮೂಲಕ ಕಾಯಕಕ್ಕೆ ಮಹತ್ವದ ಸ್ಥಾನಮಾನ ನೀಡಿದ ಕೀರ್ತಿ ಶರಣರಿಗೆ ಸಲ್ಲುತ್ತದೆ. ದಯವೇ ಧರ್ಮದ ಮೂಲ, ಮಾನವೀಯ ಮೌಲ್ಯಗಳಿಗೆ ಹೆಚ್ಚು ಮಹತ್ವವನ್ನು ಶರಣರು ನೀಡಿದ್ದಾರೆಂದು ಶರಣಬಸವ ದೇವರು ತಿಳಿಸಿದರು.



ಬಸವಣ್ಣನವರನ್ನು 'ಅಪ್ಪನವರು' ಎಂದು ಕರೆದ, ಕರೆಯುವ ಮೂಲಕ ನಾಡಿನ ಮೂಲೆ ಮೂಲೆಗೆ ಪಾದಯಾತ್ರೆ ಮೂಲಕ ಸಂದೇಶ ನೀಡಿ, ಬಸವಣ್ಣನವರ ವಚನ ಸಾಹಿತ್ಯವನ್ನು ಬೆನ್ನಿಗೆ ಕಟ್ಟಿಕೊಂಡು ಹೋಗುತ್ತಿರುವದು ಸಾಮಾನ್ಯವಾಗಿತ್ತು ಎಂದರು.

ಮಹಾಂತ ಮಂದಾರ ಮಠದ ಮಹಾಂತ ದೇವರು ಮಾತನಾಡಿ, ಪ್ರವಚನದಿಂದ ಮನಸ್ಸಿಗೆ ಶಾಂತಿ ದೊರೆಯುವದರಿಂದ ಒಳ್ಳೆಯ ಆರೋಗ್ಯ ಮತ್ತು ಆದರ್ಶ ವಿಚಾರಗಳು ಬರುತ್ತವೆ ಎಂದರು.

ಸದಾಶಿವ ಗಾಯಕವಾಡ, ಶಂಕರ ಜಾಲಿಗಿಡದ, ಬಸವಂತ ಬಾಣಕಾರ, ಶ್ರೀಕಾಂತ ಕುಲಗೋಡ, ಭೀಮಶಿ ಹಾದಿಮನಿ, ವಿಠ್ಠಲ ಕಾಂಬಳೆ, ಸುನೀಲ ಕೊಣ್ಣೂರ, ಸಚಿನ ತೆಲಸಂಗ, ಶಂಕರ ಹೊಸೂರ, ಸದಾಶಿವ ಕೋಪರ್ಡೆ, ಮಹಾದೇವಿ ತುಂಗಳ, ಮಹಾದೇವಿ ಕೊಳಕಿ, ಕುಳ್ಳಿ, ನುಚ್ಚಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಲೋಕಸಭಾ ಚುನಾವಣೆ-2024: ಎಸಿ ಅಧ್ಯಕ್ಷತೆಯಲ್ಲಿ ಸಭೆ

# ಅಧಿಕಾರಿಗಳ ಜೊತೆ ಪರಸ್ಪರ ಸಮನ್ವಯ ಅಗತ್ಯ: ಜಗಲಾಸರ

**ಬಾಗಲಕೋಟೆ :** ಚುನಾವಣೆ ಕಾರ್ಯಕ್ಕೆ ನೇಮಿಸಲಾದ ವಿವಿಧ ಅಧಿಕಾರಿಗಳ ನಡುವೆ ಪರಸ್ಪರ ಸಮನ್ವಯ ಅಗ್ಯವಾಗಿದೆ ಎಂದು ಉಪವಿಭಾಗಾಧಿಕಾರಿ ಆಗಿರುವ ಬಾಗಲಕೋಟೆ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ಸಂತೋಷ ಜಗಲಾಸರ ಹೇಳಿದರು.



ತಾಲೂಕಾ ತಹಶೀಲ್ದಾರ ಕಾರ್ಯಾಲಯದ ಸಭಾಭವನದಲ್ಲಿ ಲೋಕಸಭಾ ಸಾರ್ವತ್ರಿಕ ಚುನಾವಣೆ-2024ಕ್ಕೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸುವ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸೆಕ್ಟರ ಅಧಿಕಾರಿಗಳಿಗೆ ಮತಗಟ್ಟೆ ಅಧಿಕಾರಿಗಳು, ಮತಗಟ್ಟೆ ಮಟ್ಟದ ಮೇಲ್ವಿಚಾರಕರ ನಡುವೆ ಸಮನ್ವಯತೆ ಇದ್ದರೆ ಮಾತ್ರ ಕೆಲಸಗಳು ನಡೆಯಲು ಸಾಧ್ಯವಾಗುತ್ತದೆ. ಆದ್ದರಿಂದ ಮತದಾನ ಮಾಡುವ ದಿನಾಂಕದಿಂದ ಮೊದಲೇ ಮತಗಟ್ಟೆಗೆ ಸಂಬಂಧಿಸಿದ ಅಧಿಕಾರಿಗಳು ಮತಗಟ್ಟೆಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಇರುವ ಬಗ್ಗೆ ಖಾತ್ರಿಪಡಿಸಿಕೊಳ್ಳಲು ಸೂಚಿಸಿದರು.

ಮತಗಟ್ಟೆ ಮಟ್ಟದ ಮೇಲ್ವಿಚಾರಕರು 85 ವರ್ಷ ಮೇಲ್ಪಟ್ಟ ಮತ್ತು ಅಂಗವಿಕಲ ಮತದಾರರ ಮಾಹಿತಿಯನ್ನು ಸೆಕ್ಟರ ಅಧಿಕಾ-ರಿಗಳಿಗೆ ನೀಡಬೇಕು. ಮನೆಯಲ್ಲಿ ಮತದಾನ ಮತ್ತು ಮತಗಟ್ಟೆಗೆ ಹೋಗಿ ಮತದಾನ ಮಾಡುವುದು ಇದ್ದು, ಈ ಎಡರು ವಿಧದ ಮತದಾರರ ಮಾಹಿತಿ ಆಧಾರ ಮೇಲೆ ರೂಟನ್ನು ನಿರ್ಧರಿಸಲು ತಿಳಿಸಿದರು. ಇವೆಲ್ಲ ಕಾರ್ಯ ಮತದಾನ ನಡೆಯುವ ಪೂರ್ವದಲ್ಲಿ ಆಗಬೇಕಿದೆ. ಸೆಕ್ಟರ ಅಧಿಕಾ-ರಿಗಳು 12 ನಮೂನೆಯನ್ನು 85 ವರ್ಷ ಮೇಲ್ಪಟ್ಟ ಮತ್ತು ಅಂವಿಕಲ ಮತದಾರರಿಗೆ ವಿತರಿಸುವ ಸಮಯದಲ್ಲಿ ಮತಗಟ್ಟೆ ಅಧಿಕಾ-ರಿಗಳು ಜೊತೆಗೆ ಕಾರ್ಯನಿರ್ವಹಿಸಲು ತಿಳಿಸಿದರು.

ಶಾಲೆಗಳಲ್ಲಿ ಶೌಚಾಲಯ ಶುಚಿಗೊಳಿಸುವುದು ಮತ್ತು ಪೀಠೋಪಕರಣಗಳನ್ನು ಕಾಪಾಡುವುದು, ನೀರಿನ ಸರಬರಾಜು ವ್ಯವಸ್ಥೆ ಸೇರಿದಂತೆ ಇತರೆ ಮೂಲಭೂತ ಸೌಕರ್ಯಗಳನ್ನು ಕಾಪಾಡುವುದು ಶಿಕ್ಷಣ ಇಲಾಖೆಯ ಕರ್ತವ್ಯವಾಗಿದೆ. ಮತಗಟ್ಟೆ ಅಧಿಕಾರಿಗಳು ಸರಿಯಾಗಿ ಕಾರ್ಯನಿರ್ವಹಿಸದ ಬಗ್ಗೆ ತಹಶೀಲ್ದಾರ ಸಭೆಗೆ ತಿಳಿಸಿದಾಗ ಮತಗಟ್ಟೆಗೆ ಸಂಬಂಧಿಸಿದ ಅಧಿಕಾರಿಗಳು ಕರ್ತವ್ಯದಲ್ಲಿ ನಿಷ್ಕಾಳಜಿ ತೋರಿದಲ್ಲಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು. ಚುನಾವಣೆ ಕಾರ್ಯದಲ್ಲಿ ನೀಡಲಾದ ನಿರ್ದೇಶನಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಮೂಲಕ ಚುನಾವಣೆಯನ್ನು ಯಶಸ್ವಿಗೊಳಿಸಲು ತಿಳಿಸಿದರು.

ಸಭೆಯಲ್ಲಿ ತಹಶೀಲ್ದಾರ ಅಮರೇಶ ಪಮ್ಮಾರ, ನಗರಸಭೆ ಪೌರಾಯುಕ್ತ ವಾಸಣ್ಣ ಆರ್, ತಾಲೂಕಾ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿ ಜೀವನಕುಮಾರ, ಕ್ಷೇತ್ರ ಶಿಕ್ಷಣಾಧಿಕಾರಿ ದೊಡಮನಿ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ದಸ್ತಗಿರಿಸಾಬ ಮುಲ್ಲಾ ಸೇರಿದಂತೆ ಪಟ್ಟಣ ಪಂಚಾಯತ ಮುಖ್ಯಾಧಿಕಾರಿಗಳು ಮತ್ತು ಗ್ರಾಮ ಆಡಳಿತ ಅಧಿಕಾರಿಗಳು ಉಪಸ್ಥಿತರಿದ್ದರು.

## ಪತ್ರಕರ್ತರ ಸಂಘದಿಂದ ಪ್ರತಿಭಟನೆ

**ಹುಬ್ಬಳ್ಳಿ :** ಪತ್ರಕರ್ತರನ್ನು ಹೀನಾಯ ಶಬ್ದಗಳಿಂದ ನಿಂದಿಸಿದ ಉತ್ತರ ಕನ್ನಡ ಬಿಜೆಪಿ ಸಂಸದ ಅನಂತಕುಮಾರ ಹೆಗಡೆ ಅವರ ಹೇಳಿಕೆ ವಿರೋಧಿಸಿ ಹಾಗೂ ಕಾಂಗ್ರೆಸ್ ರಾಜ್ಯ ಸಭೆ ಸದಸ್ಯ ಸಯ್ಯದ್ ನಾಸೀರ್ ಹುಸೇನ್ ಪತ್ರಕರ್ತರ ಜೊತೆಗೆ ಅನುಚಿತವಾಗಿ ವರ್ತಿಸಿದ್ದನ್ನು ಖಂಡಿಸಿ ಧಾರವಾಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸದಸ್ಯರು ನಗರದಲ್ಲಿ ಪ್ರತಿಭಟನೆ ನಡೆಸಿ ತಹಶಿಲ್ದಾರ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಿದರು.



ನಗರದ ತಹಶಿಲ್ದಾರ ಕಚೇರಿ ಆವರಣದಲ್ಲಿ ಸಮಾವೇಶಗೊಂಡು ಇಬ್ಬರು ಸಂಸದ್ವರ ಬೇಜವಾಬ್ದಾರಿ ಹೇಳಿಕೆ ಹಾಗೂ ವರ್ತನೆ ಪ್ರಜಾಪ್ರಭುತ್ವ ಮೂಲತತ್ವಕ್ಕೆ ಧಕ್ಕೆ ತರುವಂತಿದೆ.

ಪ್ರಜಾಪ್ರಭುತ್ವದ ನಾಲ್ಕನೇ ಅಂಗವೆಂದೆ ಗುರುತಿಸಿಕೊಂಡಿರುವ ಮಾಧ್ಯಮದ ಮೇಲೆ ಈ ರೀತಿಯ ದೌರ್ಜನ್ಯಗಳು ಇತ್ತೀಚಿನ ವರ್ಷಗಳಲ್ಲಿ ಚುನಾಯಿತ ಪ್ರತಿನಿಧಿಗಳಿಂದಲ್ಲೇ ಹೆಚ್ಚುತ್ತಿರುವುದು ಆತಂಕಕಾರಿ ಸಂಗತಿ ಎಂದು ಪ್ರತಿಭಟನಾಕಾರರು ಕಳವಳ ವ್ಯಕ್ತಪಡಿಸಿದರು.

ಇಂತಹ ಜನಪ್ರತಿನಿಧಿಗಳನ್ನು ಎಚ್ಚರಿಸುವದು ಹಾಗೂ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕೆಲವೇ ಕೆಲವು ರಾಜಕಾರಣಿಗಳಿಂದ ಇಂತಹ ಅನುಚಿತ ಪ್ರಸಂಗಗಳು ಪುನರಾವರ್ತನೆಯಾಗುವ ಸಾಧ್ಯತೆಯಿವೆ ಹಾಗಾಗಿ ಕೂಡಲೇ ಸಂಸದದ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಧಾರವಾಡ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷರಾದ ಲೋಚನೇಶ ಹೂಗಾರ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಸಮಿತಿ ಸದಸ್ಯರಾದ ಗಣಪತಿ ಗಂಗೊಳ್ಳಿ, ಸಂಘದ ಕಾರ್ಯದರ್ಶಿಗಳಾದ ಸುಶೀಲೆಂದ್ರ ಕುಂದರಗಿ ಸೇರಿದಂತೆ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

## ಧಾರವಾಡ: ಕಲಿಕಾ ಪ್ರೋತ್ಸಾಹ ಧನ ವಿತರಣೆ

**ಧಾರವಾಡ :** ಇನ್ನೊಬ್ಬರ ಒಳಿತಿಗಾಗಿ ಬಾಳುವುದೇ ಸರ್ವಶ್ರೇಷ್ಠವಾದುದು. ದಿ. ಆರ್. ಎಸ್. ಹೂಗಾರಅವರುಇನ್ನೊಬ್ಬರ ಏಳಿಗೆಗಾಗಿ ಬದುಕಿಚಿರಸ್ಥಾಯಿಯಾಗಿದ್ದಾರೆಎಂದು ಹುಬ್ಬಳ್ಳಿಯ ಮಾಜಿ ಸಂಸದ ಪ್ರೊ.ಐ. ಜಿ. ಸನದಿ ಹೇಳಿದರು.

ಅವರುಕರ್ನಾಟಕ ವಿದ್ಯಾವರ್ಧಕ ಸಂಘವು ಬ್ಯಾಂಕಿಂಗ್-ಕ್ಷೇತ್ರದ ಭೀಷ್ಮ ದಿ.ಆರ್.ಎಸ್.ಹೂಗಾರದತ್ತಿ ಅಂಗವಾಗಿ ಅವರ 84ನೇ ಜನ್ಮದಿನದ ನಿಮಿತ್ಯ 'ಆರ್.ಎಸ್.ಹೂಗಾರ ಸೇವಾರತ್ನ ಪ್ರಶಸ್ತಿ-2024' ಪ್ರದಾನ ಮತ್ತು ಬಡ ವಿದ್ಯಾರ್ಥಿಗಳಿಗೆ 'ಕಲಿಕಾ ಪ್ರೋತ್ಸಾಹಧನ' ವಿತರಣೆ ಮಾಡಿ ಮಾತನಾಡುತ್ತಿದ್ದರು.



ಮುಂದುವರೆದು ಮಾತನಾಡಿದಅವರು, ತಂದೆ-ತಾಯಿಯಋಣತೀರಿಸುವುದು ಎಷ್ಟು ಮುಖ್ಯವೋ ಸಮಾಜದಋಣವನ್ನುತೀರಿಸುವುದು ಅಷ್ಟೇ ಮುಖ್ಯ. ದಿ. ಆರ್.ಎಸ್. ಹೂಗಾರಅವರು ಬ್ಯಾಂಕಿಂಗ್‌ಕ್ಷೇತ್ರದಲ್ಲಿ ಎಷ್ಟೇ ಎತ್ತರಕ್ಕೂ ಬೆಳೆದರೂ ಅವರಲ್ಲಿದ್ದ ಸಾಮಾಜಿಕತುಡಿತ ಅವಿಸ್ಮರಣೀಯವಾದದ್ದು.

ಶ್ರೀಯುತರು ಅಣ್ಣಿಗೇರಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ, ಬೆಳೆಸಿ ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಗೆ ಅವಕಾಶ ಮಾಡಿಕೊಟ್ಟಿದ್ದು ಪುಣ್ಯದಕಾರ್ಯ.ತಮ್ಮಕರ್ತವ್ಯ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಬ್ಯಾಂಕಿಂಗ್‌ಕ್ಷೇತ್ರವನ್ನುಅಂತರಾಷ್ಟ್ರೀಯ ಮಟ್ಟಕ್ಕೆ ಬೆಳೆಸಿದ ಕೀರ್ತಿಗೆ ಭಾಜನರಾಗಿದ್ದಾರೆ.ಶಂಕರಣ್ಣ ಮುನವಳ್ಳಿಯವರು ಶಿಕ್ಷಣ ಸಂಸ್ಥೆಗಳನ್ನು ಹಾಗೂ ಸಹಕಾರಿಕ್ಷೇತ್ರವನ್ನುಉನ್ನತ ಮಟ್ಟಕ್ಕೆ ಬೆಳೆಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ.ಅವರುಜನಮೆಚ್ಚುವಕಾರ್ಯ ಮಾಡಿದ ಮಹಾನುಭಾವರುಎಂದು ಶ್ಲಾಘಿಸಿದರು.

ಕೆ.ಎಲ್.ಇ ಸಂಸ್ಥೆಯ ನಿರ್ದೇಶಕ ಶಂಕರಣ್ಣ ಮುನವಳ್ಳಿ ಅವರು 'ಆರ್.ಎಸ್. ಹೂಗಾರ ಸೇವಾರತ್ನ ಪ್ರಶಸ್ತಿ-2024' ಸ್ವೀಕರಿಸಿ ಮಾತನಾಡಿ, ಜೀವನದಲ್ಲಿಅವಶ್ಯಕತೆಇದ್ದವರಿಗೆ ಸಹಾಯ ಮಾಡುವುದೇ ಶ್ರೇಷ್ಠ ಧರ್ಮ.ನಾವು ಯಾವುದೇಕಾರ್ಯ ಮಾಡಲಿ ಇನ್ನೊಬ್ಬರನ್ನು ಖುಷಿಪಡಿಸುವುದಕ್ಕಾಗಿಅಲ್ಲ. ನಮ್ಮಆತ್ಮಸಾಕ್ಷಿಗನುಗುಣ ವಾಗಿಕಾರ್ಯ ಮಾಡಬೇಕು.ನಾವು ಮಾಡಿದ ಒಳ್ಳೆಯ ಕಾರ್ಯಗಳು ಸದಾವಕಾಲದಲ್ಲಿಜನಮಾನಸದಲ್ಲಿ ಶಾಶ್ವತವಾಗಿ ಉಳಿಯುತ್ತವೆ. ಕೆ.ಎಲ್.ಇ. ಶಿಕ್ಷಣ ಸಂಸ್ಥೆಗಳನ್ನು ಬೆಳಗಾವಿಗಿಂತ ಹುಬ್ಬಳ್ಳಿ ಮತ್ತುಧಾರವಾಡದಲ್ಲಿ ಹೆಚ್ಚು ಸ್ಥಾಪಿಸಿ ಗುಣಮಟ್ಟದ ಶಿಕ್ಷಣವನ್ನು ನೀಡುವಒಂದು ಅವಕಾಶ ನನಗೆ ಲಭಿಸಿದ್ದು ಖುಷಿಕೊಡುವ ವಿಷಯವಾಗಿದೆ. ಆರ್.ಎಸ್. ಹೂಗಾರ ಸೇವಾರತ್ನ ಪ್ರಶಸ್ತಿಯು ನನಗೆ ಜೀವನದಲ್ಲಿಇನ್ನೂ ಹೆಚ್ಚಿನ ಸಮಾಜಸೇವೆ ಮಾಡಲು ಶಕ್ತಿ ನೀಡಿದೆಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಘದಅಧ್ಯಕ್ಷಚಂದ್ರಕಾಂತ ಬೆಲ್ಲದ ಮಾತನಾಡಿ, ದಿ. ಆರ್.ಎಸ್. ಹೂಗಾರ ಭೌತಿಕವಾಗಿ ನಮ್ಮಜೊತೆಇಲ್ಲದಿದ್ದರೂಅವರ ಕಾರ್ಯಗಳು ನಮಗೆಲ್ಲದಾರಿದೀಪವಾಗಿವೆ.

ಶಂಕರಣ್ಣ ಮುನವಳ್ಳಿ ಅಂತಹಯೋಗ್ಯ ವ್ಯಕ್ತಿಗಳಿಗೆ ದಿ.ಆರ್.ಎಸ್. ಹೂಗಾರ ಸೇವಾರತ್ನ ಪ್ರಶಸ್ತಿ ಲಭಿಸಿದ್ದು ಅಭಿನಂದನೀಯಎಂದರು.

ಬಡ ವಿದ್ಯಾರ್ಥಿಗಳಾದ ರಾಕೇಶ ಮಂಜುನಾಥಗಡಾದ, ಖತೆಜಾಬಿ ಕೋಟೂರ, ಪ್ರಜ್ವಲ ಹೊನ್ನಳ್ಳಿ, ವರ್ಷಾ ಮೋಹನ ಗದಗಅವರಿಗೆ ದಿ. ಆರ್.ಎಸ್.ಹೂಗಾರದತ್ತಿ ಪರವಾಗಿ ಕಲಿಕಾ ಪ್ರೋತ್ಸಾಹಧನ ನೀಡಿಗೌರವಿಸಲಾಯಿತು. ಡಾ. ಜಿನದತ್ತ ಹಡಗಲಿ ಸ್ವಾಗತಿಸಿದರು. ಶಂಕರ ಹಲಗತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಶಿವಾನಂದ ಭಾವಿಕಟ್ಟಿ ಸನ್ಮಾನ ಪತ್ರ ವಾಚಿಸಿದರು.ಶಂಕರ ಕುಂಬಿ ನಿರೂಪಿಸಿದರು.ವೀರಣ್ಣಒಡ್ಡೀನ ವಂದಿಸಿದರು.

## ಬೇಸಿಗೆಗಿಂತ ಮೊದಲೆ ಉಷ್ಣಾಂಶ ಹೆಚ್ಚಾಗಿದ್ದು ಜಿಲ್ಲೆಯ ಜನ ಮುಂಜಾಗೃತಿವಹಸಿ: ಡಾ. ವೀರಣ್ಣ ಚರಂತಿಮಠ




**ಬಾಗಲಕೋಟೆ :** ಪ್ರಸ್ತುತ ಬೇಸಿಗೆ ಕಾಲ ಪ್ರಾರಂಭವಾಗಿದ್ದು ಈ ವರ್ಷ ಬರ,ಕುಡಿಯುವ ನೀರು ಸಮಸ್ಯೆ ಬೆನ್ನಲ್ಲೇ ಉತ್ತರ ಕರ್ನಾಟಕದ ಬಾಗಲಕೋಟೆ ಸೇರಿದಂತೆ 8 ಜಿಲ್ಲೆಗೆ ಉಷ್ಣದ ಅಲೇ ಬೀತಿ ಎದುರಾಗಲಿದೆ ಎಂದು ಹವಾಮಾನ ಇಲಾಖೆ ಮುನ್ನಚ್ಚರಿಕೆ ನೀಡಿದೆ, ಜಿಲ್ಲೆಯ ಜನರು ನೀರನ್ನು ಮಿತವಾಗಿ ಬಳಸಿ ಉಷ್ಣಾಂಶದಿಂದ ಮುಂಜಾಗೃತ ಕ್ರಮಗಳನ್ನು ಅನುಸರಿಸಿ ಜಾಗೃತರಾಗಿರಬೇಕು ಎಂದು ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ತಿಳಿಸಿದ್ದಾರೆ,

ರಾಜ್ಯದಲ್ಲಿ ಕಳೇದ ವರ್ಷ ಮುಂಗಾರು ಹಾಗೂ ಹಿಂಗಾರು ಅವಧಿಯಲ್ಲಿ ಭಾರೀ ಪ್ರಮಾಣದ ಮಳೆ ಕೋರತೆಯಿಂದ ಬರ ಪರಿಸ್ಥಿತಿ ಉಂಟಾಗಿತ್ತು, ಬೇಸಿಗೆ ಆರಂಭಕ್ಕೂ ಮುನ್ನವೆ ಇದೀಗ ಉಷ್ಣ ಅಲೆಯ ಭೀತಿ ಎದುರಾಗುತ್ತಿರುವುದು ಮಾನವನಿಗೆ ಮಾತ್ರವಲ್ಲದೆ ಪ್ರಾಣಿ,ಪಕ್ಷಿ ಸೇರಿದಂತೆ ಇಡಿ ಜೀವ ಸಂಕುಲಕ್ಕೆ ಸಂಕಷ್ಟ ಬರಬಹುದು, ಬೇಸಿಗೆಯ ತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ, ಪರಿಣಾಮ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ ವಾಡಿಕೆ ಪ್ರಮಾಣಕ್ಕಿಂತ 3ರಿಂದ 5 ಡಿಗ್ರಿ ಸೆಲ್ಸಿಯಸ್ ವರೆಗೆ ಹೆಚ್ಚಾಗಿದೆ, ಜಿಲ್ಲೆಗಳಲ್ಲಿ 40 ಡಿಗ್ರಿ ಸೆಲ್ಸಿಯಸ್ ಗಿಂತ ಹೆಚ್ಚು ದಾಖಲಾಗಿ ಉಷ್ಣ ಅಲೆ ಉಂಟಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಎಚ್ಚರಿಕೆ ನೀಡಿರುವ ಈ ಸಂಧರ್ಭದಲ್ಲಿ ಜಿಲ್ಲಾಢಳಿತ ಕುಡಿಯುವ ನೀರಿಗೆ ತೋಂದರೆಯಾಗದಂತೆ, ದನಕರುಗಳಿಗೆ ಮೇವಿನ ತೊಂದರೆಯಾಗದಂತೆ ಏಚ್ಚರವಹಿಸಬೇಕು, ಜೋತೆಗೆ ಜಿಲ್ಲೆಯ ಜನರು ನೀರನ್ನು ಮೀತವಾಗಿ ಬಳಸಿ, ಪ್ರಾಣಿ ಪಕ್ಷೀಗಳಿಗೆ ಅಹಾರ ನೀರನ್ನೀಟ್ಟು, ವಯಸ್ಸಾದವರು,ಮಕ್ಕಳು ಬಿಸಿಲಿಗೆ ಬರುವುದು ಕಡಿಮೆಮಾಡಿ, ಜಾಸ್ತಿ ನೀರು ಕುಡಿಯುವುದು, ಹತ್ತಿಯಿಂದ ತಯಾರಿಸಿದ ಬಟ್ಟೆಗಳನ್ನು ಹಾಕಿಕೊಳ್ಳಿ, ಒಟ್ಟಾರೆ ಈ ಬೇಸಿಗೆಯಲ್ಲಿ ಸುರಕ್ಷತೆಯ ಮುಂಜಾಗೃತ ಕ್ರಮಗಳನ್ನು ಅನುಸರಿಸಿ, ಜಾಗೃತರಾಗಿರಬೇಕು ಎಂದು ಅವರು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

## ಮನರೇಗಾ ಸಹಾಯವಾಣಿ ಪ್ರಾರಂಭ

**ಬೆಳಗಾವಿ :** ಜಿಲ್ಲೆಯ ಗ್ರಾಮೀಣ ಪ್ರದೇಶದ ಬಡವರ್ಗದ ಅರ್ಹರಿಗೆ ಮಹಾತ್ಮಗಾಂದಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಮೂಲಕ ಉದ್ಯೋಗ ನೀಡುವ ನಿಟ್ಟಿನಲ್ಲಿ ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ತಲುಪಲು ದೂರವಾಣಿ ಹಾಗೂ ವಾಟ್ಸಪ್ಪ ಸಹಾಯವಾಣಿ ಆರಂಭಿಸಲಾಗಿದೆ. ಸಾರ್ವಜನಿಕರು 8073109488 ಸಂಖ್ಯೆಗೆ ದೂರವಾಣಿ ಹಾಗೂ ವಾಟ್ಸಪ ಮೂಲಕ ಉದ್ಯೋಗದ ಬೇಡಿಕೆ, ಗ್ರಾಮ ಪಂಚಾಯತಿಗಳಿಗೆ ಸ್ಪಂದನೆ ಸೇರಿದಂತೆ ಮನರೇಗಾ ಯೋಜನೆಯ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದಾಗಿದೆ. ಈ ಸಹಾಯವಾಣಿಯನ್ನು ಜನರ ಅನುಕೂಲಕ್ಕಾಗಿ ಪ್ರಾರಂಭಿಸಲಾಗಿದ್ದು ಅರ್ಹರು ಇದರ ಸದುಪಯೋಗ ಪಡೆದುಕೊಳ್ಳಬಹುದಾಗಿದೆ ಎಂದು ಜಿ.ಪಂ. ಸಿ.ಇ.ಓ. ರಾಹುಲ ಶಿಂಧೆ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

## ಕೋಮಲ ಕುದರಿಮೋತಿ ಬರೆದ ಗ್ರಂಥ ಲೋಕಾರ್ಪಣೆ




**ಕೊಪ್ಪಳ :** ಶ್ರೀ ಅಕ್ಕಮಹಾದೇವಿ ಮಹಿಳಾ ಮಂಡಳದ ಅಧ್ಯಕ್ಷರಾಗಿರುವ ಸಾಹಿತಿ ಶ್ರೀಮತಿ ಕೋಮಲ ಕುದುರೆಮೋತಿ ಇವರು ಬರೆದ ವೈವಿಧ್ಯ ಮನೋಹರ ಮದುವೆಗಳು ಕೃತಿ ಗ್ರಂಥವನ್ನು ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಾಗಿರುವ ಶ್ರೀಮತಿ ಯಶೋಧ ಒಂಟಗೋಡಿ ಅವರು ಬಿಡುಗಡೆಗೊಳಿಸಿ ಲೋಕಾರ್ಪಣೆ ಮಾಡಿದರು

ಕೊಪ್ಪಳ ನಗರದ ಕೋಟೆ ರಸ್ತೆಯಲ್ಲಿರುವ ಶ್ರೀ ಅಕ್ಕಮಹಾದೇವಿ ಮಹಿಳಾ ಮಂಡಳದ ಕಚೇರಿ ಸಭಾಂಗಣದಲ್ಲಿ ಏರ್ಪಡಿಸಿದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭದಲ್ಲಿ ಗ್ರಂಥ ಲೋಕಾರ್ಪಣೆ ಗೊಳಿಸಿ ಮಾತನಾಡಿದರು

ಮುಖ್ಯ ಅತಿಥಿಗಳಾಗಿ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶ್ರೀಮತಿ ರೂಪ ಎಸ್ ಗಂಧದ ಸಾಹಿತಿ ಗಳಾದ ಡಾ ಮಹಾಂತೇಶ್ ಮಲ್ಲನಗೌಡ ಮಹೇಶ್ ಮನ್ನಾಪುರ ಈಶ್ವರ ಹತ್ತಿ ಸಮೂಹ ಸಂಸ್ಥೆಯ ಸಂಯೋಜಕ ಎಚ್ ಎನ್ ಬಸಪ್ಪ ಸಂಗೀತ ಕಲಾವಿದೆ ಅನ್ನಪೂರ್ಣಮ್ಮ ಮನ್ನಾಪುರ ಶ್ರೀ ಅಕ್ಕಮಹಾದೇವಿ ಮಹಿಳಾ ಮಂಡಳದ ಅಧ್ಯಕ್ಷರಾದ ಶ್ರೀಮತಿ ಕೋಮಲ ಕುದುರೆಮೋತಿ ಸೇರಿದಂತೆ ಸಂಸ್ಥೆಯ ಪದಾಧಿಕಾರಿಗಳಾದ ಕವಿತಾ ಸೋಮಲಾಪುರ್, ವಿಜಯ ಮುದಗಲ್ ಮಧು ಹಡಗಲಿ ಶಿಲ್ಪಾ ರಾಣಿ ಪುರಾಣಿ ಮಠ ವಿಜಯ ಗಿರಿಜಾಬಳ್ಳೊಳ್ಳಿ ಸಂಧ್ಯಾ ಚಕ್ಕಿ ನಿವೇದಿತಾ ಸಂಕ್ಲಾಪುರ ಗಿರಿಜಾ ಮಳ್ಳಿಕೇರಿ ಜ್ಯೋತಿ ವಡ್ಡಟ್ಟಿ ಶಾಂತ ಸಂಕ್ಲಾಪುರ ಇನ್ನು ಅನೇಕರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

## ಪೌರತ್ವ ತಿದ್ದುಪಡಿ(ಸಿಎಎ) ಭರವಸೆಯನ್ನು ಈಡೇರಿಸಿದ್ದೇವೆ: ಕೇಂದ್ರ ಗೃಹ ಸಚಿವ ಅಮಿತ್ ಶಾ

**ತೆಲಂಗಾಣ :** ತೆಲಂಗಾಣದಲ್ಲಿ ಮಂಗಳವಾರ ನಡೆದ 'ಸಮಾಜಿ-ಕ ಜಾಲತಾಣ ಹೋರಾಟಗಾರರ ಭೇಟಿ' ಮತ್ತು 'ವಿಜಯ್ ಸಂಕಲ್ಪ ಸಮ್ಮೇಳನ'ದ ವೇಳೆ ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು, 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ದೇಶಾದ್ಯಂತ ಸಿಎಎ ಜಾರಿಗೊಳಿಸುವ ಭರವಸೆಯನ್ನು ನೀಡಿತ್ತು. 2024 ರಲ್ಲಿ, ನಾವು ಸಿಎಎ ಭರವಸೆಯನ್ನು ಪೂರೈಸಿದ್ದೇವೆ. ಅಂಂ ಅಡಿಯಲ್ಲಿ ಯಾವುದೇ ನಾಗರಿಕರ ಪೌರತ್ವವನ್ನು ರದ್ದುಗೊಳಿಸಲಾಗುವುದಿಲ್ಲ; ಇದು ಪೌರತ್ವವನ್ನು ನೀಡುವ ಕಾನೂನು, ಕಸಿದುಕೊಳ್ಳುವ ಕಾನೂನಲ್ಲ.



ಅಭಿವೃದ್ಧಿ ಮತ್ತು 'ಅಂತ್ಯೋದಯ' ರಾಜಕಾರಣಕ್ಕೆ ಹೆಸರು ವಾಸಿಯಾಗಿರುವ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರು ಬಾಂಗ್ಲಾದೇಶ, ಅಫ್ಘಾನಿಸ್ತಾನ ಮತ್ತು ಪಾಕಿಸ್ತಾನದ ಹಿಂದೂ, ಸಿಖ್, ಬೌದ್ಧ ಮತ್ತು ಜೈನ ನಿರಾಶ್ರಿತರಿಗೆ ಪೌರತ್ವ ನೀಡುವುದಾಗಿ ಭರವಸೆ ನೀಡಿದ್ದರು. ಎಲ್ಲಾ ವಿರೋಧಗಳ ನಡುವೆಯೂ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 2024 ರಲ್ಲಿ ಐತಿಹಾಸಿಕ ನಿರ್ಧಾರವನ್ನು ತೆಗೆದುಕೊಂಡು, ಸಿಎಎಯನ್ನು ದೇಶಾದ್ಯಂತ ಯಶಸ್ವಿಯಾಗಿ ಜಾ-ರಿಗೆ ತಂದರು. ಇದರ ಅಡಿಯಲ್ಲಿ ಆ ದೇಶಗಳಿಂದ ಕಿರುಕುಳಕ್ಕೊಳಗಾದ ಲಕ್ಷಾಂತರ ಹಿಂದೂ, ಸಿಖ್, ಬೌದ್ಧ ಮತ್ತು ಜೈನ ನಿರಾಶ್ರಿತರಿಗೆ ಪೌರತ್ವವನ್ನು ನೀಡಲಾಗುವುದು. ಇಂದು ಅಮೃತ ಕಾಲದಲ್ಲಿ ಶೋಷಣೆಗೆ ಒಳಗಾದ ನಿರಾಶ್ರಿತರಿಗೆ ಪೌರತ್ವ ನೀಡಲಾಗುತ್ತಿದ್ದು, ಗೌರವಯುತ ಜೀವನ ನಡೆಸುವ ಅವರ ಆಶಯವನ್ನು ಈಡೇರಿಸಲಾಗುತ್ತಿದೆ. ಸ್ವಾತಂತ್ರ್ಯದ ನಂತರ ದಶಕಗಳ ಕಾಲ ಕಾಂಗ್ರೆಸ್ ಸರ್ಕಾರ ತುಷ್ಟೀಕರಣದ ರಾಜಕಾರಣದಿಂದ ಸಿಎಎಯನ್ನು ಜಾರಿಗೆ ತಂದಿರಲಿಲ್ಲ. ಇತ್ತೀಚೆಗಷ್ಟೇ ತೆಲಂಗಾಣದಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಮಜ್ಲಿಸ್ ಪ್ರಭಾವವನ್ನು ತಗ್ಗಿಸಲು ತೆಲಂಗಾಣ ಜನತೆ ಕಾಂಗ್ರೆಸ್ ಮೇಲೆ ವಿಶ್ವಾಸ ವ್ಯಕ್ತಪಡಿಸಿದ್ದರು. ಆದರೆ, ತೆಲಂಗಾಣ ವಿಧಾನಸಭೆ ಆರಂಭವಾದ ಕೂಡಲೇ ಮಜ್ಲಿಸ್ ನಾಯಕನನ್ನೆ ಹಂಗಾಮಿ ಸ್ಪೀಕರ್ ಮಾಡಲು ಕಾಂಗ್ರೆಸ್ ಶ್ರಮಿಸಿತ್ತು.

370ನೇ ವಿಧಿ ರದ್ದತಿಯಾಗಿರಲಿ, ಭವ್ಯ ರಾಮ ಮಂದಿರ ನಿರ್ಮಾಣವಾಗಲಿ, ತ್ರಿವಳಿ ತಲಾಖ್ ನಿರ್ಮೂಲನೆಯಾಗಲಿ - ಕಳೆದ 10 ವರ್ಷಗಳಲ್ಲಿ ಮೋದಿ ಸರಕಾರವು ನೀಡಿದ ಪ್ರತಿ ಭರವಸೆಯನ್ನು ಈಡೇರಿಸಿದೆ ಎಂಬುದು ದೇಶದ ನಾಗರಿಕರಿಗೆ ತಿಳಿದಿದೆ. ಲೋಕಸಭೆ ಚುನಾವಣೆಗೆ ಮುನ್ನ ಸಿಎಎ ಅನುಷ್ಠಾನವು ಅಮಿತ್ ಶಾ ಅವರ ಚಾಣಕ್ಯ ನೀತಿಗಳಲ್ಲಿ ಒಂದಾಗಿದೆ.

2024ರ ಲೋಕಸಭೆ ಚುನಾವಣೆ ಸಮೀಪಿಸುತ್ತಿದ್ದಂತೆ ಚುನಾವಣಾ ಕಣದಲ್ಲಿ ರಾಜಕೀಯ ಪಕ್ಷಗಳು ಮುಖಾಮುಖಿಯಾಗುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಭಾರತೀಯ ಜನತಾ ಪಕ್ಷದ ಹಿರಿಯ ನಾಯಕ ಅಮಿತ್ ಶಾ ಅವರು ಮತ್ತೊಮ್ಮೆ ಕಮಲವನ್ನು ಅರಳಿಸಿ 2024ರಲ್ಲಿ ಮತ್ತೊಮ್ಮೆ ನರೇಂದ್ರ ಮೋದಿ ಅವರನ್ನು ಪ್ರಧಾನಿಯನ್ನಾಗಿ ಮಾಡಲು ಸನ್ನದ್ಧಗಿದ್ದಾರೆ. ಭಾರತದ ರಾಜಕೀಯದ 'ಚಾಣಕ್ಯ ಅಮಿತ್ ಶಾ ಅವರ ಚುನಾವಣಾ ತಯಾರಿ, ಚುನಾವಣಾ ಪೂರ್ವ ಕಾರ್ಯತಂತ್ರಗಳು ಮತ್ತು ಸಂಘಟನೆಯ ಕಡೆಗೆ ಅವ-ರಿಗಿರುವ ಶ್ರದ್ಧೆ ನೋಡಿದರೆ, ಯಾವುದೇ ಚುನಾವಣೆಯ ಫಲಿತಾಂಶವು ಅವರ ಪರವಾಗಿರುತ್ತದೆ ಎಂದು ಭಾವಿಸುವುದು ಸುರಕ್ಷಿತ. ಒಂದು ಕಾಲದಲ್ಲಿ ದೇಶದ ಕೆಲ ರಾಜ್ಯಗಳಲ್ಲಿ ಬಿಜೆಪಿಯ ಸ್ಥಿತಿ ಅತ್ಯಂತ ದುರ್ಬಲವಾಗಿದ್ದಾಗ, ಅಮಿತ್ ಶಾ ತಮ್ಮ ಕಾರ್ಯತಂತ್ರಗಳ ಮೂಲಕ ಬಿಜೆಪಿಯನ್ನು ಪ್ರಬಲ ಸ್ಥಾನಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ.

ಭಾರತದ ರಾಜಕೀಯದಲ್ಲಿ 'ಮೋದಿ ಮ್ಯಾಜಿಕ್'ನಂತೆ, ಯಾವುದೇ ಚುನಾವಣೆಯಲ್ಲಿ ಮತ ಗಳಿಸಲು ಅಮಿತ್ ಶಾ ಹೆಸರು ಸಾಕು. ಮೋದಿ ಸರ್ಕಾರದ ಸಾಧನೆಗಳು ಮತ್ತು ಪೂರೈಸಿದ ಭರವಸೆಗಳ ಆಧಾರದ ಮೇಲೆ ಈ ಬಾರಿ 400 ಕ್ಕೂ ಅಧಿಕ ಸ್ಥಾನಗಳ ಜೊತೆ

ನರೇಂದ್ರ ಮೋದಿ ಸರ್ಕಾರ ಪ್ರಬಲ ಪುನರಾಗಮನವನ್ನು ಮಾಡುವುದು ಖಚಿತವಾಗಿದೆ.

## ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರಕ್ಕೆ ನೇಮಕ

**ಕೊಪ್ಪಳ :** ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರಕ್ಕೆ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಹಾಗೂ ಸದಸ್ಯ ಕಾರ್ಯದರ್ಶಿಯವರನ್ನು ಎರಡು ವರ್ಷದ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ತಕ್ಷಣದಿಂದ ಜಾರಿಗೆ ಬರುವಂತೆ ನೇಮಿಸಿ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಆಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸರ್ಕಾರದ ಕಾರ್ಯದರ್ಶಿಗಳಾದ ಡಾ ಪ್ರಕಾಶ್ ಜಿ.ಸಿ ಅವರು ಆದೇಶ ಹೊರಡಿಸಿದ್ದಾರೆ.

ಶಕ್ತಿ, ಗೃಹ ಜ್ಯೋತಿ, ಅನ್ನಭಾಗ್ಯ, ಗೃಹಲಕ್ಷ್ಮೀ ಮತ್ತು ಯುವ ನಿಧಿ ಯೋಜನೆಗಳು ಈಗಾಗಲೇ ಜಾರಿಗೊಂಡಿದ್ದು, ಈ ಎಲ್ಲಾ ಗ್ಯಾರಂಟಿ ಯೋಜನೆಗಳ ಲಾಭಗಳನ್ನು ಅರ್ಹ ಫಲಾನುಭವಿಗಳಿಗೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಮೇಲ್ವಿಚಾರಣೆಗಾಗಿ ಸಾಂಸ್ಥಿಕ ಕಾರ್ಯವಿಧಾನಗಳನ್ನು ಜಾರಿಗೆ ತರಲು ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರಕ್ಕೆ ನೇಮಕ ಮಾಡಲಾಗಿದೆ.

ಕೊಪ್ಪಳ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರಕ್ಕೆ ಅಧ್ಯಕ್ಷರನ್ನಾಗಿ ಗಂಗಾವತಿ ತಾಲ್ಲೂಕಿನ ಶ್ರೀರಾಮನಗರದ ರೆಡ್ಡಿ ಶ್ರೀನಿವಾಸ ಅವರನ್ನು ನೇಮಿಸಲಾಗಿದೆ. ಉಪಾಧ್ಯಕ್ಷರಾಗಿ ಗಂಗಾವತಿಯ ಎಸ್.ಟಿ.ಖಾದ್ರಿ, ಹುಲಿಗಿಯ ಟಿ.ಜನಾರ್ಧನ, ತಾವರಗೇರೆಯ ಚಂದ್ರಶೇಖರ ನಾಲತವಾಡ, ಕುಕನೂರಿನ ಖಾಸಿಂಸಾಬ್ ಮರ್ದಾನ್ ಸಾಬ್ ಹಾಗೂ ಕಾರಟಗಿಯ ನಾಗರಾಜ ಅರಳಿ ಅವರು ನೇಮಕವಾಗಿದ್ದಾರೆ. ಸದಸ್ಯರನ್ನಾಗಿ ಯಲಬುರ್ಗಾದ ಮಲ್ಲಪ್ಪ ಯಮನಪ್ಪ ಜಕಲಿ, ಮುನಿರಾಬಾದಿನ ಬಾಲಚಂದ್ರ ಸ್ಯಾಮುವೆಲ್, ಮರ್ಲಾನಹಳ್ಳಿಯ ಸೋಮನಾಥ ದೊಡ್ಡಮನಿ, ಹನುಮಸಾಗದ ಫಾರೂಖ್ ದಲಾಯತ್, ಕಾರಟ-ಗಿಯ ಶಕುಂತಲಾ, ಕುಷ್ಟಗಿಯ ಶಾರದಾ ಕಟ್ಟಿಮನಿ, ಹನುಮಸಾಗರದ ಮೈನುದ್ದೀನ್ ಖಾಜಿ, ಕನಕಗಿರಿಯ ಹಜರತ್ ಹುಸೇನ್, ನಿಲೋಗಲ್‌ನ ಮಲ್ಲಪ್ಪ ಭಂಡಾರಿ, ಕೊರ್ಲಹಳ್ಳಿಯ ಸುಧೀರ್ ಶಾಮಾಚಾರ, ಗಂಗಾವತಿಯ ಆನಂದ ಹಾಸಲಕರ, ಬರಗೂರಿನ ದೇವಪ್ಪ ಬಾವಿಕಟ್ಟಿ, ಬಸವನದುರ್ಗಾದ ವೆಂಕಟೇಶ್ ಬಾಬು, ಕುಕನೂರಿನ ಸಂಗಪ್ಪ ವೀರಪ್ಪ ಗುತ್ತಿ ಮತ್ತು ಕೊಪ್ಪಳದ ಅಮ್ಜದ್ ಪಟೇಲ್ ಇವರನ್ನು ನೇಮಿಸಿದೆ. ಕೊಪ್ಪಳ ಅಪರ ಜಿಲ್ಲಾಧಿಕಾರಿಗಳನ್ನು ಸದಸ್ಯ ಕಾರ್ಯದರ್ಶಿಗಳನ್ನಾಗಿ ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

